
# ಮಾನಸಿ

ತಿಂಗಳ ಪತ್ರಿಕೆ

ಜನವರಿ : 2001




❄ ರೆಕ್ಕೆ ಕಟ್ಟುವಿರಾ?

❄ 'ಮುಕ್ತ ನಾಟಕ'

❄ ಬಹುವಚನದವರ ಮೇಲೆ ಏಕವಚನದವರ ದಾಳಿ

❄ "ಹೆಣ್ಣಲ್ಲವೇ"

❄ "ಬದಲಾಗಲಿ ಬದುಕು"

# ಮಾನಸ

ತಿಂಗಳ ಪತ್ರಿಕೆ

ಸಂಪುಟ : 18 ಸಂಚಿಕೆ : 12

ಜನವರಿ : 2001





ವಿಳಾಸ

"ಮಾನಸ" ತಿಂಗಳ ಪತ್ರಿಕೆ

ಪಂಚಾಯಿತಿ ರಸ್ತೆ

ಕಾಡುಗೋಡಿ ಪೋಸ್ಟ್

ಬೆಂಗಳೂರು - 560 067



ಸೂಚನೆ : ಬಿಡಿ ಪ್ರತಿ **4-00** ರೂ.

ವಾರ್ಷಿಕ ಚಂದಾ **50-00** ರೂ.

ಒಂದು ವಿಶೇಷ ಸಂಚಿಕೆಯೊಂದಿಗೆ

ಒಟ್ಟು ಹನ್ನೊಂದು ಸಂಚಿಕೆಗಳು


## *ಈ ಸಂಚಿಕೆಯಲ್ಲಿ......*






ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ

ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - ೫೬೦ ೦೬೭



# ಸಂಪಾದಕೀಯ

ಗುಜರಾತ್‌ನಲ್ಲಿ ಭೂಕಂಪದಿಂದಾದ ದುರಂತ ಹೃದಯ ವಿದ್ರಾವಕ. ದುರಂತದಲ್ಲಿ ನೊಂದವರಿಗೆ ನೆರವು ನೀಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಭೂಕಂಪದಂತಹ ನೈಸರ್ಗಿಕ ಸಮಸ್ಯೆಗಳಿಗೆ ಕಾಡುನಾಶ, ಕಲ್ಲುಬೆಟ್ಟಗಳನ್ನು ಬೋಳಿಸುತ್ತಿರುವ ಗ್ರ್ಯಾನೈಟ್ ವ್ಯಾಪಾರ, ಗಣಿಗಾರಿಕೆ, ಅಣುಸ್ಫೋಟ, ಮುಂತಾದವು ಕಾರಣಗಳಾಗಿವೆ. ಇದಕ್ಕೆ ಸಂಬಂಧಪಟ್ಟಂತೆ ನಿಖರವಾದ ಮಾಹಿತಿಯನ್ನು ನೀಡಲು ಸರ್ಕಾರ ವಿಫಲವಾಗಿದೆ.

ಜಾಗತೀಕರಣದ ಹಿನ್ನೆಲೆಯಲ್ಲಿ ನೈಸರ್ಗಿಕ ದುರಂತಗಳಿಗೂ, ಸರ್ಕಾರದ ಆದ್ಯತೆ ಜನರಲ್ಲಿ ಹೆಚ್ಚುತ್ತಿರುವ ಸರಕು ಸಂಸ್ಕೃತಿಗೂ ನೇರವಾದ ಸಂಬಂಧವಿದೆ. ಇಂತಹ ದುರಂತಗಳ ಶಾಶ್ವತ ಪರಿಹಾರಕ್ಕೆ ಬೇಕಾಗಿರುವುದು ಜನಪರ ರಾಜಕೀಯ ನಿಲುವು, ಆರ್ಥಿಕ ಯೋಜನೆಗಳು.

ಒಂದು ಚಳುವಳಿಯನ್ನು ಕಟ್ಟುವ ಪ್ರಕ್ರಿಯೆಯಲ್ಲಿ ನಾಟಕ, ಸಿನಿಮಾ, ಸಾಹಿತ್ಯ, ಪ್ರಮುಖ ಪಾತ್ರವನ್ನು ವಹಿಸುತ್ತವೆ. ಮಹಿಳಾ ಚಳುವಳಿಯು ಇದಕ್ಕೆ ಹೊರತಾಗಿಲ್ಲ ಮಹಿಳೆಯರ ಆತ್ಮಗೌರವ, ಘನತೆಯನ್ನು ಎತ್ತಿಹಿಡಿಯುತ್ತಲೇ, ಅದರ ಅಂತರಂಗದ ನೋವಿಗೆ, ಸಿಟ್ಟಿಗೆ ಧ್ವನಿಯಾಗುತ್ತಿವೆ. ಈ ಧ್ವನಿಗಳು ಹಣದ ಹಾಗೂ ಅಧಿಕಾರದ ನೆಲೆಯಿಂದ ಮುಕ್ತವಾದಾಗಲೇ ನೈಜವಾಗಿರುತ್ತವೆ.

ಬಹುರಾಷ್ಟ್ರೀಯ ಕಂಪನಿಯ ಸರದಾರರನ್ನು ಕೈಬೀಸಿ ಕರೆಯುವ ಹೈಟೆಕ್ ಕೃಷ್ಣ ಇತ್ತೀಚೆಗ ರತ್ನಕಂಬಳಿ ಹಾಸಿದ್ದು ಚೈನಾದ ಅಧ್ಯಕ್ಷರಿಗೆ. ಈ ಭೇಟಿಯ ಸಂದರ್ಭದಲ್ಲಿ ಟಿಬೇಟಿಯನ್ನರ ಮೇಲೆ ಚೈನಾದ ದಬ್ಬಾಳಿಕೆಯನ್ನು ವಿರೋಧಿಸಬೇಕೆಂದಿದ್ದ ಟಿಬೇಟಿಯನ್ ವಿದ್ಯಾರ್ಥಿಗಳನ್ನು ಭಾರತದ ಪ್ರಜೆಗಳಲ್ಲ, ನಿರಾಶ್ರಿತರೆಂಬ ಕಾರಣ ನೀಡಿ ಬಂಧಿಸಲಾಯ್ತು. ಇದೆ ಲೀ ಪೆಂಗ್, ಚೈನಾದ ಸಾವಿರಾರು ವಿದ್ಯಾರ್ಥಿಗಳನ್ನು ತೀನ್ನೈಮನ್ ಚೌಕದಲ್ಲಿ ಮಾರಣಹೋಮ ಮಾಡಿಸಿದ್ದು ಐತಿಹಾಸಿಕ ಸತ್ಯ. ಟಿಬೇಟಿಯನ್ನರ ಪ್ರಜಾಸತ್ತಾತ್ಮಕ ಹೋರಾಟಗಳನ್ನು ಹತ್ತಿಕ್ಕುತ್ತಿರುವ ವ್ಯವಸ್ಥೆಯ ವಿರುದ್ಧದ ಹೋರಾಟಕ್ಕೆ ನಮ್ಮ ಬೆಂಬಲವಿದೆ.

*○ ಸಂಪಾದಕೀಯ ಮಂಡಳಿ*

# ರೆಕ್ಕೆ ಕಟ್ಟುವಿರಾ?

1998 ಮೇ 11, ಭಾರತ ಸರ್ಕಾರ ಅಣುಬಾಂಬ್‌ಗಳನ್ನು ರಾಜಾಸ್ತಾನದ ಪೋಕ್ರಾನ್ ಎಂಬಲ್ಲಿ ಪರೀಕ್ಷಾರ್ಥವಾಗಿ ಸಿಡಿಸಿತು. ಪರೀಕ್ಷೆ ಯಶಸ್ವಿಯಾಗಿ ನಡೆದು, ಬಾಂಬ್ ಸೃಷ್ಟಿಸಿದ ವಿಜ್ಞಾನಿಗಳು ಸಾರ್ಥಕರಾದರು. ಅದ್ಭುತ ಯಶಸ್ಸಿನಿಂದ ದೇಶದ ನಾಯಕರುಗಳು ಆನಂದ ಭಾಷ್ಪ ಸುರಿಸಿದರು. ಮಹತ್ತರ ವೈಜ್ಞಾನಿಕ ಸಾಧನೆ ಎಂದು ಬೀಗಿದರು. ದಿನ ಪತ್ರಿಕೆಗಳು ಮೊದಲ ಪುಟದಲ್ಲಿ ದಪ್ಪಕ್ಷರಗಳಲ್ಲಿ ವೈಜ್ಞಾನಿಕ ಸಾಧನೆ ಕುರಿತು ಬರೆದವು. ವೈಜ್ಞಾನಿಕ ಸಾಧನೆಯೊಂದಿಗೆ ದೇಶ ಪ್ರೇಮವನ್ನು ತಳುಕು ಹಾಕಿ ಉನ್ಮಾದ ಹುಟ್ಟು ಹಾಕಲಾಯಿತು. ಈ ಉನ್ಮಾದದಲ್ಲಿ, ಪೋಕ್ರಾನ್ ಭೂಮಿ 120 ಕಿ.ಮೀ.ವರೆಗೂ ನಡುಗಿ ಕಂಪಿಸಿದ್ದು ಯಾರಿಗೂ ತಟ್ಟಲಿಲ್ಲ.

ಶಾಲೆಯ ಪಾಠದಲ್ಲಿ ಹಿರೋಶಿಮಾ, ನಾಗಾಸಾಕಿ ಕುರಿತು ಓದ್ದಿದ್ದಾಗ, ಟೀಚರ್ ಹೇಳಿದಾಗ ಅದ್ಯಾವುದೂ ಭೂತವಷ್ಟೇ ವರ್ತಮಾನವಲ್ಲ, ಭವಿಷ್ಯವಲ್ಲ ಎಂದುಕೊಂಡಿದ್ದೆ. ಜೀವ ಸಂಕುಲವನ್ನು ಒಂದೇ ಏಟಿಗೆ ಧ್ವಂಸ ಮಾಡುವ ಅಸ್ತ್ರವೊಂದನ್ನು ಯೋಚಿಸಿ, ಯೋಜಿಸಿ ಕೋಟ್ಯಾಂತರ ರೂಪಾಯಿ ಸುರಿದು ತಯಾರು ಮಾಡುವ ಹಿಂದಿರುವ ಮನಸ್ಸುಗಳ ಕ್ರೂರತೆ ನಡುಕ ಹುಟ್ಟಿಸಿತು. ಯಾರನ್ನು ಕಾಯಬೇಕೆಂದು ಬಾಂಬ್ ಅನ್ನು ತಯಾರಿಸುತ್ತಾರೋ ಆ ಜನರ ಅನುಮತಿಯನ್ನು ಕೇಳಿದ್ದರೆ? ವಿಕಲಾಂಗ ಮಕ್ಕಳನ್ನು ಹೆತ್ತು ಸಂಕಟ ಪಡುವ ತಾಯಂದಿರ ಅನುಮತಿ ಪಡೆದರೆ? ಯುದ್ಧಕ್ಕೆ ಕಾರಣವೆ ಆಗದ ಪಶು, ಪಕ್ಷಿ, ಪ್ರಾಣಿಗಳ ಅನುಮತಿ ಪಡೆದರೆ? ಸಣ್ಣದೊಂದು ಇರುವೆ ಸತ್ತರೂ ಮರಳಿ ಜೀವಕೊಡಲಾರದ ನಮಗೆ ಕೊಲ್ಲುವ ಹಕ್ಕಿದೆಯೆ? ಹೀಗೇ ಏನೇನೋ ಪ್ರಶ್ನೆಗಳು, ಒತ್ತರಿಸಿ ಬರುವ ಸಂಕಟ. ಎಷ್ಟು ಮಾತನಾಡಿದರೂ ಸಮಾಧಾನವಾಗದು. ಅಣುಬಾಂಬ್ ಅನ್ನು gut levelನಿಂದಷ್ಟೇ ವಿರೋಧಿಸಿದರೆ ಸಾಲದೆಂದು ಅದನ್ನು ಕುರಿತು ಮಾನಸ ಬಳಗದಲ್ಲಿ ಮಾಹಿತಿ ಸಂಗ್ರಹಿಸಿ, ಓದಿ, ವಿಷಯ ತಿಳಿದವರ ಮಾತು ಕೇಳಿ, ಚರ್ಚಿಸಿ, ಸಿನಿಮಾಗಳನ್ನು ನೋಡಿ ವಿಶೇಷ ಸಂಚಿಕೆ ತಂದೆವು. ನಮ್ಮ ವಿರೋಧಕ್ಕೆ ಒಂದು Strong base ಸಿಕ್ಕಿತು. ಆದರೂ ಹೊಟ್ಟೆಯಲ್ಲಿನ ಸಂಕಟ ತಣ್ಣಗಾಗಲಿಲ್ಲ. ಬಾಂಬ್ ವಿರುದ್ಧ ಪ್ರತಿಭಟಿಸಲೇ ಬೇಕೆನಿಸಿತು. ಆದರೆ ಪ್ರತಿಭಟನೆ ಬರೀ ವಾಚ್ಯವಾಗದೆ ಕ್ರಿಯಾತ್ಮಕವಾಗಿರಬೇಕು. ಅದು ಹೇಗೆ ಸಾಧ್ಯ ವಾಗಬಹುದು?

ಅಣುಬಾಂಬ್ ಕುರಿತು ಮಾಹಿತಿ ಸಂಗ್ರಹಿಸುವಾಗ ಹಿರೋಶಿಮಾ, ನಾಗಾಸಾಕಿಗಳಲ್ಲಿ ನಡೆದ ಬಾಂಬ್ ದಾಳಿಯಲ್ಲಿ ಬದುಕುಳಿದವರ ಅನುಭವಗಳು ಸಿಕ್ಕವು. ಅದರಲ್ಲಿ ಪುಟ್ಟ ಹುಡುಗನೊಬ್ಬ ತಾಯಿಯನ್ನು ಕಳೆದುಕೊಂಡ ಅನುಭವ, ಮಗಳನ್ನು, ಮಗನನ್ನು ಕಳೆದುಕೊಂಡ ತಾಯಿಯೊಬ್ಬಳ ಅನುಭವ ಕುರಿತು ಓದಿದಾಗ ಹಿರೋಶಿಮಾ, ನಾಗಾಸಾಕಿ ದುರಂತ ಹಸಿಯಾಗಿ ಕಣ್ಣು ಮುಂದೆ ನಿಂತಿತು.

ಪುಟ್ಟ ಹುಡುಗನ ಮುಂದೆ ಬೆಂದು ಮುದ್ದೆಯಾಗಿ ನರಳಾಡುವ ತಾಯಿ. ಏನೂ ಅರಿಯದ ಹುಡುಗನಿಗೆ ತಾಯಿಯ ಸಂಕಟ ಕಂಡು ಅಳು. ಅವನಿಗೆ ಏನೂ ತಿಳಿಯದು. ತಿಳಿಯುವುದು ಒಂದೆ ತನ್ನ ತಾಯಿಯ ಸಂಕಟಕ್ಕೆ ಕಾರಣ ಆಗಾಗ ಹಾರಾಡುತ್ತಿರುವ ಮಿಲಿಟರಿ ವಿಮಾನಗಳು. ಅದಕ್ಕೆ ವಿಮಾನದ ಸದ್ದಾದಾಗಲೆಲ್ಲ ಕಕ್ಕಸು ಕೋಣೆಯೊಳಗೆ ಹೋಗಿ ಕಿಟಕಿಯಲ್ಲಿ ಆ ವಿಮಾನ ನೋಡಿ you stupidಎಂದು ಯಾರಿಗೂ ಕಾಣದೆ ಬಯ್ದು ಬರುತ್ತಿರುತ್ತಾನೆ. ಹಾಸಿಗೆಯ ಮೇಲೆ ಬೋರಲಾಗಿ ನರಳುವ ತಾಯಿ ಹಾಸಿಗೆಯ ಮೇಲೇ ಕಕ್ಕಸು ಮಾಡಿಕೊಳ್ಳು ತ್ತಾಳೆ. ಕಕ್ಕಸು ನೋಡಿ ಗಾಭರಿ! ಅದು ಮಾಮೂಲಿ ಯಾಗಿರದೆ ಅಂಟಿನಂತೆ ಕರುಳುಗಳು ನುಲಿದುಕೊಂಡು ಈಚೆ ಬಂದಂತಿರುತ್ತದೆ. ಯಾವಾಗಲೊ ರಾತ್ರಿಯಲ್ಲಿ ತಾಯಿ ಕೂಗುತ್ತಾಳೆ. ಇವನಿಗೆ ಕೇಳಿಸಿದರು ಸುಮ್ಮನೆ ಮುಖ ತಿರುಗಿಸಿ ಮಲಗಿರುತ್ತಾನೆ. ಸ್ವಲ್ಪ ಸಮಯದ ನಂತರ ತಾಯಿಯ ನರಳಾಟ ಶಾಂತವಾಗುತ್ತದೆ. ಎದ್ದು ನೋಡಿದಾಗ ಕಣ್ಣು ತೆರೆದುಕೊಂಡು ಶಾಂತಳಾಗಿ ಮಲಗಿದ್ದಾಳೆ. ಕೆನ್ನೆಯ ಮೇಲೆ ಹರಿದುನಿಂತ ಕಣ್ಣೀರು. ಆ ಕಣ್ಣೀರು ಹೇಳಿದ್ದೇನೊ? ಅದು ಮಗನ ಭವಿಷ್ಯವೇನೆಂಬ ಚಿಂತೆ ಕುರಿತು ಹೇಳಿದ್ದೆ? ಸಣ್ಣ ಹುಡುಗ ನಾಗಿದ್ದಾಗ ಕಂಡ ದುರಂತವನ್ನು ಈಗ ಎಲ್ಲರ ಮುಂದೆ ಹೇಳಿದ್ದಾನೆ. ಈಗ ಅವನೊಬ್ಬ ವಿಜ್ಞಾನಿ.

ಇನ್ನೊಂದು ತಾಯಿಯೊಬ್ಬಳ ಸಂದರ್ಶನ. ಕೇಳಿದ ಪ್ರಶ್ನೆಗಳಿಗೆ ನಿರ್ಲಿಪ್ತಳಾಗಿ ಉತ್ತರಿಸಿದ್ದಾಳೆ. ಎರಡು ಸಂದರ್ಭ ದಲ್ಲಿ ಆಕೆ ಆಡಿರುವ ಮಾತು ಯಾರ ಕರುಳನ್ನಾದರೂ ಕತ್ತರಿಸುವಂತಿದೆ. ನನ್ನ ಮಗಳು ಕೆಲಸಕ್ಕೆ ಹೋಗಿದ್ದಳು. ದುರಂತ ಸಂಭವಿಸಿದ ಮೇಲೆ ಅವಳನ್ನು ಹುಡುಕಿಕೊಂಡು ಹೊರಟೆ. ಟೋಕಿವಾ ಸೇತುವೆ ಮುರಿದು ಬಿದ್ದಿತ್ತು. ಆಚೆ ಬದಿಗೆ

ಹೋಗಲಾಗದೆ, ನಾನು ಹಿಂತಿರುಗುವ ವೇಳೆಗೆ ಮಗಳು ಮನೆಗೆ ಬಂದಿರುತ್ತಾಳೆಂಬ ಆಶೆಯಲ್ಲಿ ಹೋದೆ. ಅವಳಿನ್ನು ಬಂದಿರಲಿಲ್ಲ. ಇಡೀ ರಾತ್ರಿ ಬಾಗಿಲು, ಕಿಟಕಿ ತೆರೆದಿಟ್ಟುಕೊಂಡು ಅವಳು ಬರುವಳೆಂದು ಕಾದೆ ಬೆಳಗ್ಗೆ ಯಾರೋ ಹುಡುಕಿಕೊಂಡು ಬಂದು ನಿಮ್ಮ ಮಗಳು ಬದುಕಿದ್ದಾಳೆ ನದಿಯ ದಂಡೆಯಲ್ಲಿ ಬಿದ್ದಿದ್ದಾಳೆ ಇನ್ನೂ ಜೀವವಿದೆ ಎಂದು ಹೇಳಿದಾಗ ಎದ್ದೆನೊಬಿದ್ದೆನೊ ಎಂದು ಹೋದೆ. ಬರಿ ಹೆಣಗಳ ರಾಶಿ, ಛಿದ್ರವಾಗಿ, ಕೊಳೆತು ನಾರುವ ಹೆಣಗಳು. ಎದುರಿಗೆ ಹುಡುಗಿಯೊಬ್ಬಳು ಬರುತ್ತಿದ್ದಳು. ಅವಳ ಚರ್ಮ ಹರಿದು ಬರುತ್ತಿತ್ತು. ನೀರು ಕೇಳುತ್ತಿದ್ದಳು. ಮಗಳಿರಬಹುದೆಂದು ಹತ್ತಿರ ಹೋದೆ, ನನ್ನ ಮಗಳಾಗಿರಲಿಲ್ಲ ನೀರು ಕೇಳಿದ್ದನ್ನು ಲೆಕ್ಕಿಸಿದೆ ಮತ್ತೆ ಓಡಿದೆ. ಅವಳಿಗೆ ನೀರು ಕೊಡದೆ ತಪ್ಪು ಮಾಡಿದೆ ಎನಿಸುತ್ತದೆ ಈಗ. ಹೆಣಗಳ ಮಧ್ಯೆ ಬಿದ್ದಿದ್ದ ಮಗಳೇ ನನ್ನನ್ನು ಗುರುತಿಸಿ ಅಮ್ಮ ಎಂದು ಕೂಗಿದಳು. ನನಗೆ ಗುರುತೇ ಹಿಡಿಯಲಾಗಲಿಲ್ಲ. ಮೈ ಚರ್ಮವೆಲ್ಲಾ ಸುಟ್ಟು ಕಿತ್ತು ಬರುತ್ತಿತ್ತು. ಜೊತೆಗೆ ಸುರಿಯುತ್ತಿದ್ದ ಹಳದಿ ಕೀವು. ನನ್ನ ಬದುಕಿಸು ಅಮ್ಮ ಎಂದಳು. ಜೀವ ಹಿಡಿದುಕೋ ಮಗಳೇ ಎಂದೆ. ಅಣ್ಣ ಬರುವವರೆಗೂ ನಾನು ಸಾಯುವುದಿಲ್ಲ ಅಮ್ಮಾ ಎನ್ನುತ್ತಲೆ ನನ್ನ ಮಡಿಲಲ್ಲಿ ಜೀವ ಬಿಟ್ಟಳು. ಏನೂ ತೋಚದೆ ಒಂಭತ್ತು ಗಂಟೆಗಳ ಕಾಲ ಅವಳನ್ನು ಅಪ್ಪಿ ಹಿಡಿದುಕೂತಿದ್ದೆ, ಅವಳ ಗಾಯದೊಳಗಿನ ಹುಳುಗಳನ್ನು ಹೆಕ್ಕಿ ತೆಗೆಯುತ್ತಾ. ಮಗಳು ಸತ್ತ ಎರಡು ತಿಂಗಳ ನಂತರ ಯುದ್ಧಕ್ಕೆ ಹೋಗಿದ್ದ ಮಗ ಬಂದ. ತಂಗಿಯ ವಿಷಯ ಕೇಳಿ ಬೇಸರವಾಗಿ ಓಡುತ್ತಿದ್ದ ರೈಲಿನಿಂದ ಬಿದ್ದು ಆತ್ಮಹತ್ಯೆ ಮಾಡಿಕೊಂಡ. ವಿಕಿರಣದ ಪರಿಣಾಮದಿಂದಾಗಿ ನನ್ನ ತಲೆಯ ಕೂದಲೆಲ್ಲ ಉದುರಿ ಹೋಗಿದೆ, ಮೈಯ ಚರ್ಮವೆಲ್ಲ ಉದುರಿ ಬೀಳುತ್ತಿದೆ. ವಿಕಿರಣದ ಪರಿಣಾಮ ಅಧ್ಯಯನ ಮಾಡಲೆಂದು ನಮ್ಮನ್ನು ಈ ವೈದ್ಯಕೀಯ ಸಂಸ್ಥೆಯಲ್ಲಿಟ್ಟುಕೊಂಡಿದ್ದಾರೆ. ಇಲ್ಲಿ ನನಗೆ ಹೆಸರಿಲ್ಲ, ನನ್ನ ಸಂಖ್ಯೆ 1200. ಒಟ್ಟಿನಲ್ಲಿ ಆ ದೇವರಿಗ್ಯಾಕೋ ನನ್ನ ಬಗ್ಗೆ ಕರುಣೆಯೇ ಇಲ್ಲ. ಯುದ್ಧವಿಲ್ಲದಿದ್ದರೆ ನಾನು ನನ್ನ ಮಕ್ಕಳು ಸಂತೋಷದಿಂದಿರುತ್ತಿದ್ದೆವು.

ಆ ತಾಯಿ ನನ್ನ ಮನದೊಳಗೆ ಸುಳಿಯುತ್ತಿದ್ದಳು. ಹೀಗೆ... ಆಟೋದಲ್ಲಿ ಚಿತ್ರಾಳೊಂದಿಗೆ ಹೋಗುವಾಗ ಆ ತಾಯಿಯನ್ನು ಕುರಿತು ಹೇಳಿದೆ. ಆ ತಾಯಿಯ ನೆನಪನ್ನು ಜೀವಂತವಾಗಿಸಬೇಕು. ಆ ಘಟನೆಯನ್ನು ನಾಟಕ ಮಾಡೋದು ಕಷ್ಟ ಅನ್ನಿಸುತ್ತೆ ಅಂದೆ. ಯಾಕಾಗಲ್ಲ ಖಂಡಿತ ಮಾಡಬಹುದೆಂದಳು. ಆ ಗಳಿಗೆಯಿಂದ ಆ ತಾಯಿ-ಮಗಳು ನಮ್ಮೊಳಗೆ ಜೀವಂತವಾಗತೊಡಗಿದರು.

ಸಂದರ್ಶನ ಒಂದು ಪುಟದ್ದು. ಆದರಿಂದ ಕೆಲವು ಅಂಶ ತಿಳಿಯಿತು. ಅವರು ಬಡವರು, ತಮುಷ್ಟಿಗೆ ತಾವು ನೆಮ್ಮದಿಯಾಗಿದ್ದರು. ಮಗ ಯುದ್ಧಕ್ಕೆ ಹೋಗಿದ್ದಾನೆ. ತಾಯಿ ಮಗಳಿಬ್ಬರೇ ಮನೆಯಲ್ಲಿ, ಗಂಡ ಇಲ್ಲ. ಬಾಂಬು ಬಿದ್ದಾಗ ಮಕ್ಕಳನ್ನು ಕಳೆದುಕೊಂಡು ಅನಾಥಳಾಗಿ ವೈದ್ಯಕೀಯ ಸಂಸ್ಥೆಯೊಂದರಲ್ಲಿ ಸಾವಿಗಾಗಿ ಕಾಯುತ್ತಿದ್ದಾಳೆ ತಾಯಿ. ಪುಟ್ಟ ಸಂದರ್ಶನ ಆಧರಿಸಿ Script ಮಾಡಬೇಕು, ಜನ ಸೇರಿಸಬೇಕು, ಪರಿಕರಗಳನ್ನು ಸಿದ್ಧಪಡಿಸಬೇಕು. ನಾಟಕಕ್ಕೆ ಜನರನ್ನು ಸೇರಿಸುವುದು ಪ್ರಯಾಸದ ಕೆಲಸ. ನಾಟಕವನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ. ಸರಿಯಾದ ಸಮಯಕ್ಕೆ ಎಲ್ಲರೂ ಸೇರುವುದಿಲ್ಲ ಹಾಗೂ ಹೀಗೂ ಜನರನ್ನು ಸೇರಿಸಿ ಸಂತೆಹೊತ್ತಿಗೆ ಮೂರು ಮೊಳ ನೆಯ್ದ ಹಾಗೆ ಯಾವುದೋ ಒಂದು ಕಾರ್ಯಕ್ರಮಕ್ಕೆ ತಗಡು ಬೀದಿ ನಾಟಕಗಳನ್ನು ಸಾಕಷ್ಟು ಮಾಡಿದ್ದೆವು. ಒಂದು ಸೆಮಿನಾರ್‌ನಲ್ಲಿ ವಿಷಯ ಮಂಡಿಸಬೇಕೆಂದರೆ ಮಾಹಿತಿ ಸಂಗ್ರಹಿಸಿ, ಓದಿ, ಚರ್ಚಿಸಿ ಮಾತಾಡುವವರನ್ನು ಕರೆಸಿ ನೀಟಾಗಿ ಬರೆದು ಮಂಡಿಸುತ್ತೇವೆ. Seminarಗಳನ್ನು ಅಚ್ಚುಕಟ್ಟಾಗಿ ಯೋಚಿಸಿ, ಯೋಜಿಸಿ ಮಾಡುತ್ತೇವೆ. ಇವೆಲ್ಲದರ ನಡುವೆ ನಾಟಕ ಮಾತ್ರ ಮುಖ್ಯವಾಗುವುದಿಲ್ಲ. ಹೇಗೋ ಒಂದು ಮಾಡಿದರಾಯಿತು ಎಂಬ ಭಾವನೆ. ಕೈ ಕಾಲುಗಳು ಕೂಡ ಆಡದೆ ಸಂಭಾಷಣೆಯನ್ನ ತಪ್ಪು ತಪ್ಪಾಗಿ ವದರುವುದು, ಅದು ಮೈಕಿನ ಮುಂದಕ್ಕೆ ಬಂದು. ಇನ್ಯಾರೊ ಸಂಭಾಷಣೆ ಹೇಳಬೇಕೆಂದಾಗ ಆ ಮೈಕನ್ನು ನಡುವೆ ಯಾರೋ ಬಂದು ಮುಂದೆ ಇಡುವುದು. ಹೆಂಗಸರಿಗೆ ಮೊದಲೆ ಹಿಂಜರಿಕೆ, ಕಷ್ಟಪಟ್ಟು ಪ್ರೇಕ್ಷಕರೆದುರಿಗೆ ಡೈಲಾಗ್ ಹೇಳುವುದೇ ದೊಡ್ಡದು. ಹೇಗೋ ಒಂದು ನಾಟಕ ಮಾಡಿಬಿಡಬೇಕು. ಚೆನ್ನಾಗಿ ಮಾಡದಿದ್ದರೂ ಪರವಾಗಿಲ್ಲ ಆದ್ರೆ ನಾಟಕ ಮಾಡಬೇಕು. ಚೆನ್ನಾಗಿ ಮಾಡಬೇಕು ಅಂದ್ರೆ ಟೈಂ ಬೇಕು, ದುಡ್ಡು ಬೇಕು, ಬೇಕಾದ Properties ಇರಬೇಕು, ಚೆನ್ನಾಗಿ direct ಮಾಡೋರನ್ನ ಕರಿಬೇಕು ಇವೆಲ್ಲಾ ಸಬೂಬು ಹೇಳಿ ನಮ್ಮ ಮಿತಿಯೊಳಗೆ ಇಷ್ಟು ಮಾಡ್ತಾ ಇರೋದೆ ತುಂಬಾ ದೊಡ್ಡು ಅನ್ನೊ ಹೆಗ್ಗಳಿಕೆ ಬೇರೆ.

ಅತ್ಯಂತ ಕಡಿಮೆ ಖರ್ಚಿನಲ್ಲಿ, ಕಡಿಮೆ ಪರಿಕರಗಳನ್ನಿಟ್ಟುಕೊಂಡು, ದೇಹವನ್ನೇ ಅದ್ಭುತವಾಗಿ ಬಳಸಿಕೊಂಡು ಅತ್ಯುತ್ತಮ ನಾಟಕಗಳನ್ನು ಮಾಡಬಹುದು ಎಂಬುದನ್ನು ಬಾದಲ್ ಸರ್ಕಾರ ಅವರ ವರ್ಕಶಾಪ್‌ನಲ್ಲಿ ಕಂಡಿದ್ದೆವು. ಅದು ಅಸಾಧ್ಯವೂ ಅಲ್ಲ ಎಂದು ಮನದಟ್ಟಾಗಿತ್ತು. ಅವರ ನಾಟಕದಿಂದ ಪಡೆದುಕೊಂಡ ಸ್ಫೂರ್ತಿಯೇ ನಮ್ಮ ನಾಟಕದ ಮುಖ್ಯ ಆಸ್ತಿಯಾಯ್ತು.

ಜನರನ್ನು ಒಟ್ಟುಹಾಕುವ ಬದಲು ನಾವಿಬ್ಬರೆ ಮಾಡೋಣ. ಇಬ್ಬರೆ ಮಾಡುವುದಕ್ಕೆ ಸಾಧ್ಯವಾಗುವಂತೆ ಪ್ರಯತ್ನಿಸೋಣ ಎಂದುಕೊಂಡೆವು. ಅಲ್ಲದೆ ಕಡಿಮೆ ಹಣ ಖರ್ಚು ಮಾಡಬೇಕು, ಕನಿಷ್ಟ ಪರಿಕರಗಳು (ನಾವೇ ಹೊತ್ತುಕೊಂಡು ಹೋಗುವಂತಿರ ಬೇಕು; ನಾವೇ ಜೋಡಿಸಿಕೊಳ್ಳುವಂತಿರಬೇಕು) Suggestive ಆಗಿರೊ costume ಇರಬೇಕು. ಬೀದಿ ನಾಟಕಕ್ಕಿಂತ ಸಣ್ಣ ಹಾಲ್, ಕೋಣೆಯಲ್ಲಿ ಮಾಡುವಂತಿರ ಬೇಕು.

ಸಿದ್ಧಪಡಿಸಿದ Scriptಗಿಂತ ನಾಟಕದ ಪ್ರಕ್ರಿಯೆಯಲ್ಲೆ script ಸಿದ್ಧವಾಗಬೇಕೆಂದುಕೊಂಡೆವು. ಕೂತು ಮಾತಾಡಿದೆವು, ಯೋಚಿಸಿದೆವು ಏನೋ ಒಂದು ರೂಪ ಪಡೆಯೋ ಸುಳಿವೆ ಸಿಗ್ತಾ ಇರ್ಲಿಲ್ಲ. ಹೀಗೆ ಒಂದು ದಿನ ನಾನೊಂದು ಮಂಚದ ಮೇಲೆ ಅವಳೊಂದು ಮಂಚದ ಮೇಲೆ ಬಿದ್ದುಕೊಂಡಿದ್ವಿ. ಆಗ ಚಿತ್ರಾ ಇದ್ದಕಿದ್ದಂತೆ ಅಮ್ಮ ಮಗಳನ್ನು ಬಯ್ಯುವಂತೆ ಬಯ್ಯಲು ಶುರುಮಾಡಿದಳು.

ಹೇಳಿದ್ ಮಾತ್ ಒಂದೂ ಕೇಳಲ್ಲ. ಯಾವಾಗ್ ಮನೆ ಕೆಲ್ಸ ಮುಗಿಸಿ ಕೆಲ್ಸಕ್ಕೆ ಹೋಗೋದು? ಮೂರ್ರ್ಯಾಸಿನ್ ಕೆಲ್ಸ ಆಗಿಲ್ಲ ಆಗ್ಲೆ ಗಂಟೆ ಏಳಾಯ್ತು ಇಬ್ರೂ ಸೇರಿ ಮನೆಕೆಲ್ಸ ಮುಗ್ಸಿದ್ರೆ ತಾನೇ ಕೆಲ್ಸಕ್ಕೆ ಹೋಗೋಕಾಗೋದು? ಇಬ್ರು ದುಡಿದ್ರೆ ತಾನೆ ಈ ಮನೆ ನಡೆಯೋದು.

ಅದಕ್ಕೆ ತಕ್ಕಾಗಿ ಮಗಳ ಹಾಗೇ ಏ ಹೋಗೆ ಅಮ್ಮ ಕೆಲ್ಸ ಮಾಡೋಕೆ ನಂಗೆ ಬೇಜಾರು ಅಂತ ಶುರು ಮಾಡ್ದೆ.

ಬೇಜಾರಂತೆ ಬೇಜಾರು, ನೋಡು ನೀನು ಕೆಲ್ಸ ಮಾಡ್ಕೊಟ್ರೆ ನಾನೇನೋ ನಿಂಗೆ ಇಷ್ಟವಾಗಿರೋದು ತಿನ್ನೋಕೆ ಮಾಡಿಕೊಡ್ತಿನಿ

ಆಹಾ ಕೆಲ್ಸ ಆಗ್ಬೇಕಂದ್ರೆ ಮಸ್ಕ ಹೊಡಿತಾಳೆ........

ಹೀಗೆ ಆ ಸಂಸಾರದ ಚಿತ್ರಣ ಸಿಕ್ತಾ ಹೊಯ್ತು. ಆಮೇಲೆ ಗಪ್ ಅಂತ ನಿಲ್ತು. ಬಾಂಬ್ ಬೀಳೋದು, ಹೆಣಗಳ ರಾಶಿ, ಹುಡುಕಾಟ ಸಾವು, ಆಸ್ಪತ್ರೆ ಎಲ್ಲವನ್ನು ಇಬ್ಬರೆ ಹೇಗೆ ನಿಭಾಯಿಸೋದು? ಬಾಂಬ್ ಬೀಳೋದನ್ನ ಶಬ್ದದ ಮೂಲಕ ತರೋದು. ಮಗಳೇ ಹೆಣವಾಗಿ ಬೇರೆ ಬೇರೆ ಮೂಲೆಯಲ್ಲಿ ಬಿದ್ದಿರುವಾಗ ಅಮ್ಮ ಅವಳನ್ನು ಎಡವುತ್ತಾ, ಹಾರುತ್ತ, ಒಂದು, ಎರಡೂ ಮೂರೂ ಎಂದು ಹೆಣಗಳನ್ನು ಎಣಿಸೋದು. ಹಾಗೇ ಪ್ರಯತ್ನಿಸಿದೆವು ಯಾಕೊ ಪರಿಣಾಮಕಾರಿಯಾಗಿಲ್ಲ ಅನ್ನಿಸೋಕೆ ಶುರುವಾಯ್ತು. ಪರಿಣಾಮಕಾರಿಯಾಗಿಲ್ಲ ಅನ್ನಿಸಿದ ಕೂಡಲೇ ಒಂದು ರೀತಿಯ stagnation ಶುರುವಾಯಿತು. ಯಾರದಾದ್ರು ಒಬ್ರ Openion ಬೇಕು ಅಂತ ರಶ್ಮಿಯನ್ನು ಕರೆದು ಮಾಡಿರೋವಷ್ಟನ್ನ ಆಡಿ ತೋರಿಸಿದೆವು. ಅವಳಿಗೆ ತುಂಬಾ ಇಷ್ಟ ಆಯ್ತು. ಚೆನ್ನಾಗೇ ಇದೆ ಹೀಗೆ ಮಾಡಿ ಎಂದು ಕೆಲವು ಸಲಹೆ ನೀಡಿದಳು. ಆದ್ರು ಯಾಕೋ ಚೆನ್ನಾಗಿಲ್ಲ ಅನ್ನಿಸ್ತು. ಹೇಗೇ ಚೆಂದ ಮಾಡೋದು? ಮತ್ತೆ ಸ್ಥಗಿತರಾದೆವು. ನಾಟಕ ಬರೆದು,ಆಡಿ ನಿರ್ದೇಶಿಸಿ ಅನುಭವವಿರುವ ಸುರೇಶಣ್ಣನ್ನನ್ನು ಕರೆದು ಇಲ್ಲಿವರೆಗೂ ಮಾಡಿರೋದನ್ನೆಲ್ಲ ಹೇಳಿದೆವು. ಅವನ್ನು ಉಪಯುಕ್ತವಾದ ಸಲಹೆ ನೀಡಿದ. ಬರೀ ಸಲಹೆ ಸಾಲದು ಒಟ್ಟಿಗೆ ಬಂದು ಮೂರು ದಿವಸ Work shop ಮಾಡಿ Rehersal ಮಾಡೋಣ ಅಂತ ತೀರ್ಮಾನಿಸಿ ಕಲಾಕ್ಷೇತ್ರದ Rehersal shed ಬುಕ್ ಮಾಡಿದೆವು, ಮೂರು ದಿನ ಬೆಳಗಿನಿಂದ ಸಂಜೆಯವರೆಗೂ ಯೋಚಿಸಿ, ಯೋಚಿಸಿದ್ದನ್ನು enact ಮಾಡತೊಡಗಿದೆವು. ಮೊದಲಿಗೆ ನಾಟಕಕ್ಕೆ ಬಳಸುವ space ಅನ್ನ ನಿರ್ಧರಿಸಿದೆವು. ಯಾವುದೇ ಜಾಗದಲ್ಲಾದರು stage ಇರಲಿ ಇಲ್ಲದಿರಲಿ ಮಾಡೋ ಹಾಗೇ ಇರಬೇಕೆಂದುಕೊಂಡು 25 ಅಡಿ ಅಗಲ 25 ಅಡಿ ಉದ್ದದ ಚೌಕವನ್ನ ಚಾಕ್‌ಪೀಸ್‌ನಲ್ಲಿ ಗುರುತು ಹಾಕಿಕೊಂಡೆವು. ಆಗ ಎಲ್ಲವೂ ಒಂದೊಂದಾಗಿ ಒಂದು frameನೊಳಗೆ ಬರತೊಡಗಿತು. ಮಗಳು ಚಿಟ್ಟೆ ಹಿಡಿಯುವ ತುಂಟಿಯಾದಳು. ಮಗ ದೂರ ಹೋಗಿರುವ, ಯುದ್ಧದ ಆತಂಕ ತುಂಬಿದ್ದರೂ ಮಗಳ ತುಂಟತನ, ಜೀವಂತಿಕೆಗೆ ಸ್ಪಂದಿಸುವ ತಾಯಿ. ತಳ್ಳಾಡುವ ಜನಗಳ ದೊಂಬಿ, ಮಗಳನ್ನು ಹುಡುಕಾಡುತ್ತಾ ಹೆಣಗಳನ್ನು ದಾಟುವುದನ್ನು ಮೈಮ್ ಮೂಲಕ ಮಾಡುವುದನ್ನು, ಬಾಂಬ್, ಯುದ್ಧದ ದೃಶ್ಯಕ್ಕೆ ಶಬ್ದ ಮತ್ತು ಸಂಗೀತದ ಬಳಕೆ, ಮೂರು ಭಾಗಗಳಿರುವ ಒಂದೇ ಸ್ಕ್ರೀನ್ ಮೂಲಕ ದೃಶ್ಯ ಬದಲಾಗುವುದನ್ನು ತೋರಿಸುವುದು, ದಾರುಣ ದೃಶ್ಯವನ್ನು ಅಡಿಗರ ಪದ್ಯ ಬಳಿಸಿಕೊಂಡು ಪರಿಣಾಮಕಾರಿಯಾಗಿಸುವುದು. ಚರ್ಮ ಸುಲಿದು ಬರುವುದು, ಕೂದಲು ಉದುರಿ ಬೋಡಿಯಾಗುವುದನ್ನು stokings ಮತ್ತು ಫೇವಿಕಾಲ್ ಬಳಸಿ ಮಾಡುವುದು. ಇವೆಲ್ಲವನ್ನು ಯೋಚಿಸುತ್ತಾ ಆಡುತ್ತಾ ನಾಟಕ ಒಂದು ರೂಪ ಪಡೆಯಿತು. ಎಲ್ಲವನ್ನು ಒಂದು ನಿರ್ದಿಷ್ಟ ಅವಧಿಯೊಳಗೆ ತರುವುದು ಸೂಕ್ತವೆನಿಸಿ 45 ನಿಮಿಷದೊಳಗೆ ಮುಗಿಸಬೇಕೆಂದು ನಿರ್ಧರಿಸಿದೆವು. ನಮ್ಮ ಮನಸ್ಸಿನಲ್ಲಿದ್ದುದು ಒಂದು ರೂಪ ಪಡೆದುಕೊಂಡು ಪರಿಣಾಮಕಾರಿಯಾಗಿ ಬರುವಂತೆ ಮಾಡಲು ಸುರೇಶಣ್ಣ ಸಹಾಯ ಮಾಡಿದ. ಸಮಯವೇ ಇಲ್ಲದಿದ್ದರೂ ಸಹ ನಮ್ಮ ಉತ್ಸಾಹ ನೋಡಿ ನಮ್ಮ ಪ್ರಯತ್ನದಲ್ಲಿ ಕೈಗೂಡಿಸಿದ. ಮನೆಯಲ್ಲಿ, ಮನೆಯ ಹತ್ತಿರದ ಶಾಲೆಯಲ್ಲಿ, ಹಡಪದ್ ಮಾಸ್ತರ ಕೆನ್ ಕಲಾ ಶಾಲೆಯಲ್ಲಿ ನಮ್ಮ ಪ್ರಾಕ್ಟಿಸ್ ಮುಂದುವರೆಯಿತು. ಮೇಕಪ್‌ಗೆ ರಾಮಕೃಷ್ಣ ನೆರವಾದ,

ನಾಟಕಕ್ಕೆ ತಕ್ಕದಾದ ಸ್ಕ್ರೀನ್ ಅನ್ನು ಶಶಿ ಮಾಡಿಕೊಟ್ಟ, ಸ್ಕ್ರೀನ್ ಮೇಲಿನ ಪೇಟಿಂಗ್ ಅನ್ನು ಕೃಷ್ಣ ರಾಯಚೂರ್ ಮಾಡಿಕೊಟ್ಟರು. ನಾಟಕಕ್ಕೆ ಬೇಕಾದ ಬಟ್ಟೆ ಖರೀದಿಸಿ suggestive ಆಗಿ ಇರಬೇಕೆಂದು ಹೇಳಿ ಹೊಲೆಸಿಕೊಂಡೆವು. ಸುಮ್ಮನೆ ಪ್ರಾಕ್ಟಿಸ್ ಮಾಡುತ್ತಿದ್ದರೆ ಆಗದು ಎಂದು ಪ್ರದರ್ಶನದ ಧಿನಾಂಕವನ್ನು ಗೊತ್ತು ಮಾಡಿದೆವು. ಆಗ ತಯಾರಿ ಸ್ವಲ್ಪ ಚುರುಕಾಯ್ತು. ಖರ್ಚಿನ ಹಣವನ್ನು ನಮ್ಮ ಸಂಬಳದಲ್ಲೆ ಹಾಕಿಕೊಂಡೆವು. ಪ್ರದರ್ಶನಕ್ಕೆ ಹಾಲ್ ಬುಕ್ ಮಾಡಬೇಕಾಗಿತ್ತು. 1000/-ರೂ.ಗೆ ಕಡಿಮೆ ಯಾವ ಹಾಲೂ ಸಿಕ್ಕಲಿಲ್ಲ. ಹಾಲಿಗಾಗಿ ಹುಡುಕುತ್ತಿರುವಾಗ ಶಮಂತ ಅವರು ಸಿಕ್ಕಿ ಕನ್ನಡ ಭವನದಲ್ಲಿರುವ ನಯನ ಆಡಿಟೋರಿಯಂ Free ಆಗಿ ಸಿಗುತ್ತೆ ವಿಚಾರಿಸಿ ಅಂದರು. ಅದಕ್ಕಾಗಿ ಓಡಾಡಿ ಹಾಲನ್ನು free ಆಗಿ ಪಡೆದುಕೊಂಡೆವು. ಪ್ರದರ್ಶನ ಮಾಡುವ ಮೊದಲು ಯಾರಿಗಾದರೂ ನಾಟಕ ತೋರಿಸಬೇಕೆಂದು ಒಂದು ಸಂಜೆ ವಿಜಯಾ ಮತ್ತು ವಿಶ್ವಣ್ಣನಿಗೆ ಆಡಿತೋರಿಸಿದೆವು. ಅವರಿಗೆ ನಾಟಕ ತುಂಬಾ ಇಷ್ಟವಾಯಿತು. ಅವರಿಬ್ಬರ ಪ್ರೋತ್ಸಾಹ ನಮ್ಮಲ್ಲಿ ಭರವಸೆ ತುಂಬಿತು. ಪ್ರದರ್ಶನ ನೀಡಲು ಧೈರ್ಯ ಮಾಡುತ್ತಿರುವುದರಿಂದ ಅಲ್ಲಿರುವ ಲೈಟ್‌ಗಳನ್ನು ಬಳಸಿಕೊಳ್ಳಿ, ಲೈಟಿಂಗ್ ನಾನು ಮಾಡುತ್ತೇನೆಂದರು ವಿಶ್ವಣ್ಣ. ಅವರೊಂದಿಗೆ ರಮೇಶಣ್ಣನೂ ಸೇರಿಕೊಂಡರು. 22-12-98ರಂದು ಸಂಜೆ 6 ಗಂಟೆಗೆ ನಮ್ಮ ನಾಟಕ. ಸ್ನೇಹಿತರೆಲ್ಲ ಮೊದಲೇ ಬಂದು ವಿಶ್ ಮಾಡಿದರು. ಸಮಯ ಹತ್ತಿರವಾಗುತ್ತಿದ್ದಂತೆ tension ಹೆಚ್ಚಾಗತೊಡಗಿತು. ಗಂಟಲು ಒಣಗಿ ನಡುಕ. ಸುರೇಶಣ್ಣ ನಾಟಕ ಅನೌನ್ಸ್ ಮಾಡಿ ಆಯಿತು. ಇನ್ನು Stage ಮೇಲೆ ಹೋಗಲೇಬೇಕು. ಒಬ್ಬರಿಗೊಬ್ಬರು ವಿಶ್ ಮಾಡಿಕೊಂಡು ನಾಟಕ ಪ್ರಾರಂಭಿಸಿದೆವು. ಪ್ರಾರಂಭವಾಗಿ 5 ನಿಮಿಷವಾದರೂ ನಡುಕ ನಿಂತಿರಲಿಲ್ಲ. ನಾಟಕ ಮಾಡ್ತಾ ಮಾಡ್ತಾ ಎದುರಿಗಿದ್ದ ಪ್ರೇಕ್ಷಕರು, ಮೈಕ್, ಲೈಟ್ ಎಲ್ಲವೂ ಕರಗಿ ಹೋಗುತ್ತಾ ನಾವಿಬ್ಬರು ತಾಯಿ-ಮಗಳಾಗಿ ನಾಟಕ ಮುಗಿಸಿದೆವು. ಜನರ ಪ್ರತಿಕ್ರಿಯೆ ಹುಮ್ಮಸ್ಸನ್ನು ಹೆಚ್ಚಿಸಿತು. ಕೆಲವರು ನೀಡಿದ ಸಲಹೆಗಳು ಮುಂದೆ ನಮಗೆ ತುಂಬಾ ಉಪಯೋಗವಾದವು. ಲಕ್ಷ್ಮಿ ಚಂದ್ರಶೇಖರ್ ಅವರು ಹಿಂದೂ ಪತ್ರಿಕೆಯಲ್ಲಿ ಬರೆದ ವಿಮರ್ಶೆ, ಹಾಸಾಕ್ಕ ಅವರು ನಾಟಕ ಪತ್ರಿಕೆಯಲ್ಲಿ ಬರೆದ ಪ್ರತಿಕ್ರಿಯೆ ಮುಂದೆ ಇನ್ನೂ ಹೆಚ್ಚು ಉತ್ಸಾಹದಿಂದ ನಾಟಕ ಆಡುವಂತೆ ಮಾಡಿತು.

ಹರಟೆಯಲ್ಲಿ ಹಂಚಿಕೊಂಡು ಸಾಕಾಗಿತ್ತು.
ರಂಗದಲ್ಲು ನಾಟಕ ಆಡಬೇಕೆಂಬ ಆಸೆ ಹುಟ್ಟಿಸಿ ಬರುತ್ತಿತ್ತು.
ಆಸೆಗೊಂದು ರೂಪ ಬಂದಿದೆ. ಈಗ ಹಾರಬಯಸುತ್ತಿದೆ
ನೀವು ರೆಕ್ಕೆಯಾಗಬೇಕು.
ನಮ್ಮ ಮೊದಲ ಪ್ರಯತ್ನ 'ರೆಕ್ಕೆ ಕಟ್ಟುವಿರಾ'
ಮೊದಲ ಆಟ
ದಿನಾಂಕ: 22/12/98
ಸ್ಥಳ: 'ನಯನ' ರಂಗಮಂದಿರ
ಕನ್ನಡ ಭವನ
ರವೀಂದ್ರ ಕಲಾಕ್ಷೇತ್ರ ಆವರಣ
ಜೆ. ಸಿ. ರಸ್ತೆ, ಬೆಂಗಳೂರು
ಬನ್ನಿ ಹರಸಿ

ತೆರೆ ಮರೆ

ಬಂತು. ಜನರನ್ನು ಕರೆಯಲು Invitation ಅನ್ನು ಕೈಯಲ್ಲೇ ಬರೆದು Xerox ಮಾಡಿ ಹಂಚಿದೆವು. ಇಷ್ಟೆಲ್ಲಾವನ್ನು ಸ್ನೇಹಿತರಿಗಾರಿಗೂ ಸುಳಿವು ನೀಡದಂತೆ ಮಾಡುತ್ತಿದ್ದೆವು. ಸ್ನೇಹಿತರಿಗೆಲ್ಲಾ Surprise ಮಾಡಬೇಕೆಂದಿದ್ದೆವು. ಮೊದಲ ಪ್ರದರ್ಶನವನ್ನು ಸ್ಟೇಜಿನ ಮೇಲೆ auditoriumನಲ್ಲಿ

ಬೆಂಗಳೂರು, ಕೋಲಾರ ಜಿಲ್ಲೆ, ಕೊಡಗು, ದಕ್ಷಿಣ ಕನ್ನಡ, ಹೈದ್ರಾಬಾದ್ ಎಲ್ಲೆಡೆ ಸುತ್ತಾಡಿ ಇಲ್ಲಿವರೆಗೆ 25 ಪ್ರದರ್ಶನ ನೀಡಿದ್ದೇವೆ. ಬಾಂಬ್ ಪ್ರಯೋಗ ನಡೆದ ಮೇಲೆ ಹುಟ್ಟಿಕೊಂಡಿದ್ದ hopeless ness ನಾಟಕಕ್ಕೆ ಸಿಕ್ಕ response ನಿಂದ ಕೊಂಚ ಕೊಂಚವೇ ದೂರವಾಯ್ತು. ಮನುಷ್ಯರು

ನಿಜವಾಗಲೂ ನೆಮ್ಮದಿಯ ಜೀವನವನ್ನು ಬಯಸ್ತಾರೆ ಎಂಬ ನಂಬಿಕೆ ಗಟ್ಟಿಯಾಯಿತು. ನಮ್ಮ ಮನಸ್ಸಲ್ಲಿ ಅಚ್ಚಳಿಯದೆ ನಿಂತ ಪ್ರತಿಕ್ರಿಯೆಗಳನ್ನು ಇಲ್ಲಿ ಹೇಳಲೇಬೇಕು.

ವಿಸ್ತಾರ್ ಸಂಸ್ಥೆಯವರು ಮಕ್ಕಳಿಗೆ workshop ಮಾಡುತ್ತಿದ್ದರು. ಹೈಸ್ಕೂಲ್, ಮಿಡ್ಲ್‌ಸ್ಕೂಲಿನ ಮಕ್ಕಳು. ಆ ಮಕ್ಕಳಿಗಾಗಿ ನಾಟಕ ಮಾಡಲು ಕರೆದಿದ್ದರು. ನಾಟಕ ಮಾಡಿದ ಮೇಲೆ ಮಕ್ಕಳೊಂದಿಗೆ ಮಾತನಾಡಿದೆವು. ಒಬ್ಬ ಹುಡುಗಿ "ಕಾರ್ಗಿಲ್‌ನಲ್ಲಿ ಯುದ್ಧವಾಗುತ್ತಿದ್ದಾಗ, ನಾವೇ ಗೆಲ್ಲಬೇಕು, come on India win, kill them ಅಂತಿದ್ವಿ. ಈಗ ನಿಮ್ಮ ನಾಟಕ ನೋಡಿದ ಮೇಲೆ ನಾವು ಅಂದುಕೊಂಡಿದ್ದು ತಪ್ಪು ಅನ್ನಿಸ್ತಾ ಇದೆ, ಯುದ್ಧ ಎಷ್ಟು ಕೆಟ್ಟದ್ದಲ್ಲವಾ" ಎಂದಳು.

ಕೊಡಗಿನ ಶನಿವಾರ ಸಂತೆಯಲ್ಲಿ ಒಬ್ಬ ಮಹಿಳೆ ನಾಟಕ ಮುಗಿದ ಮೇಲೆ ಬಂದು ಕೈ ಹಿಡಿದುಕೊಂಡು ತುಂಬಾ ಚೆನ್ನಾಗಿ ಮಾಡಿದ್ರಿ ಕಣ್ಣಲ್ಲಿ ನೀರು ಬಂತು "ಯುದ್ಧ ಇರ್ಲಿ ಅಕ್ಕಪಕ್ಕದ ಮನೆಯವರ ಹತ್ರ ಜಗ್ಳ ಮಾಡೋದು ತಪ್ಪು ಅನ್ನಿಸುತ್ತೆ" ಎಂದರು.

ಕುಶಾಲನಗರದ ಬಳಿ ಇರುವ ಬೆಣಗಾಲ್ ಎಂಬ ಸಣ್ಣ ಹಳ್ಳಿಯ ಯುವಕ ಕೇಂದ್ರದವರು ಅವರ ಹಳ್ಳಿಯಲ್ಲಿ ನಮ್ಮ ನಾಟಕ ಮಾಡಿಸಿದರು. ಹಳ್ಳಿಯಲ್ಲಿ ನಮ್ಮ ನಾಟಕ ಕುರಿತ ಪೋಸ್ಟರ್ ಅನ್ನು ಕೈಯಲ್ಲಿ ಬರೆದು ಕೆಲವೆಡೆ ಅಂಟಿಸಿದ್ದರು. ಕರೆಂಟ್ ಹೋಗಿದ್ದರಿಂದ ಎರಡು ಗ್ಯಾಸ್‌ಲೈಟ್ ತರಿಸಿ ಶಾಲೆಯ ಬೆಂಚುಗಳನ್ನು ಜೋಡಿಸಿ stage ಮಾಡಿ ನಾಟಕ ಮಾಡಿಸಿದರು. ಹಳ್ಳಿಯ ಪುಟ್ಟ ಮಕ್ಕಳು, ಹಿರಿಯರೆಲ್ಲ ಬಯಲಿನಲ್ಲಿ ಚಳಿಯಲ್ಲಿ ಕೂತು ನಿಶ್ಶಬ್ದವಾಗಿ ನಾಟಕ ನೋಡಿ ಚಪ್ಪಾಳೆ ಹೊಡೆದು ನಮ್ಮನ್ನು ಸನ್ಮಾನಿಸಿದರು, ನಾಟಕವಾದ ಮೇಲೆ ರುಚಿಯಾದ ಅಡುಗೆ ಮಾಡಿಸಿ ಊಟ ಹಾಕಿ ಹೋಗುವಾಗ ನಮ್ಮ ಕೈಲಾದದ್ದು ಎಂದು ಕೈಗೆ ದುಡ್ಡು ಕೊಟ್ಟರು. ಆಮೇಲೆ ನೋಡಿದಾಗ ನೂರರ ಮೂರು ನೋಟು ಕೊಟ್ಟಿದ್ದರು. ಎಷ್ಟು ಬೇಡವೆಂದರೂ ಅಷ್ಟು ದೂರದಿಂದ ಬಂದು ಒಳ್ಳೆ ಉದ್ದೇಶವಿರುವ ನಾಟಕ ತೋರಿಸಿದ್ದೀರಿ ತೆಗೆದುಕೊಳ್ಳಲೇಬೇಕೆಂದರು.

ಕುಶಾಲನಗರದ ಟೌನ್ ಹಾಲಿನಲ್ಲಿ ಮಾಡಿದ ನಮ್ಮ ನಾಟಕ ನೋಡಿ ಪುಷ್ಪವತಿ ಎನ್ನುವರು ನಿಮಗೆ ನನ್ನದೊಂದು ಪುಟ್ಟ ಕಾಣಿಕೆ ಎಂದು 10ರ 5 ನೋಟುಗಳನ್ನು ಕೈಯಲ್ಲಿಟ್ಟಿದ್ದು ನೆನಪಿನಲ್ಲಿ ಉಳಿಯುವಂತದ್ದು. ಅದೇ ಊರಿನ ಸರ್ಕಾರಿ ಶಾಲೆಯ ಮಕ್ಕಳಿಗೆ ನಾಟಕ ಮಾಡಿ ತೋರಿಸಿದೆವು. ಸುಡುವ ಬಿಸಿಲಿನಲ್ಲಿ ಕೂತು ನಿಶ್ಶಬ್ದವಾಗಿ ನಾಟಕ ನೋಡಿ ಎಷ್ಟೋ ಹೊತ್ತು ಎಡಬಿಡದೆ ಚಪ್ಪಾಳೆ ತಟ್ಟಿದ್ದು ಇನ್ನೂ ಕಿವಿಯಲ್ಲಿ ಜೋಪಾನವಾಗಿದೆ. ಪ್ರತಿಯೊಂದು ಕ್ಲಾಸಿನ ಮಕ್ಕಳು ಒಂದು, ಎರಡು, ಐದು ಎಂದು ಹಣ ಸಂಗ್ರಹಿಸಿ ರೂ. 200/- ಕ್ಕಿಂತ ಹೆಚ್ಚಿನ ಹಣ ನೀಡಿದರು. ಆ ದಿನ ಮಕ್ಕಳ ದಿನಾಚರಣೆ ಯಾದ್ದರಿಂದ ಮಕ್ಕಳಿಗೆ ಸಿಹಿ ತರಿಸಿಕೊಡಿ ಎಂದರೂ ಕೇಳಲಿಲ್ಲ. ಇದು ನಮ್ಮ ಪ್ರೀತಿಯ ಕಾಣಿಕೆ ತೆಗೆದು ಕೊಳ್ಳಲೇ ಬೇಕೆಂದರು.

ಪುತ್ತೂರಿನ ರಾಮಕೃಷ್ಣ ಹೆಣ್ಣುಮಕ್ಕಳ ಶಾಲೆಯಲ್ಲಿ ನಾಟಕ ಮಾಡಿದೆವು. ನಾವು ನೆಲದ ಮೇಲೆ ನಾಟಕ ಮಾಡಿದರೆ ಎತ್ತರದ ದಿಬ್ಬದ ಕೆಳಗಿಂದ ಮೇಲಿನವರೆಗೂ ಕೂತು ಮಕ್ಕಳು ನಾಟಕ ನೋಡಿದರು. ನಾಟಕಕ್ಕೆ ಮೊದಲೆ ಮಕ್ಕೆ ಗಲಾಟೆ ಮಾಡದೆ ನಾಟಕ ನೋಡಿ, ನಿಮ್ಮ ಮನಸ್ಸಿಗೆ ಹಿಡಿಸುವಂತಹದಕ್ಕೆ ಚಪ್ಪಾಳೆ ಹೊಡೆಯಿರಿ, ಇಷ್ಟವಾಗದ್ದನ್ನು ನಾಟಕ ಮುಗಿದ ಮೇಲೆ ಬಂದು ಹೇಳಿ ಎಂದೆವು. ಮನ ಮುಟ್ಟುವ ದೃಶ್ಯ ಬಂದಾಗಲೆಲ್ಲ ಚಪ್ಪಾಳೆ ತಟ್ಟಿ ಉತ್ಸಾಹ ತುಂಬಿಸಿದರು. ಆಂಟಿ ತುಂಬಾ ಚೆನ್ನಾಗಿ ಮಾಡಿದಿರೆಂದು ಕೈಹಿಡಿದು ಹೇಳಿದರು.

ಬೆಂಗಳೂರಿನ ವಿವೇಕಾನಂದ ಕಾಲೇಜಿನಲ್ಲಿ ನಮ್ಮ ನಾಟಕ ಮಾಡಿದೆವು. ಆ ಸಮಯದಲ್ಲಿ ನಮ್ಮ ಗುರುಗಳಾದ ಬಾದಲ್ ಸರ್ಕಾರ್ ಅವರು ಊರಿನಲ್ಲಿದ್ದರು. ಅವರು ನಮ್ಮ ನಾಟಕ ನೋಡಬೇಕೆಂದಿದ್ದರು. ಅವರೊಬ್ಬರಿಗೆ ಆಡಿ ತೋರಿಸುವುದು ಬೇಡವೆಂದು, ವಿವೇಕಾನಂದ ಕಾಲೇಜಿನಲ್ಲಿ ಅನುಮತಿ ನೀಡಿದರೆ ಆ ಕಾಲೇಜಿನ ಮಕ್ಕಳಿಗೂ ನಾಟಕ ತೋರಿಸಬಹುದೆಂದು ಕೊಂಡೆವು. ಅನುಮತಿ ಕೇಳಿದ ಕೂಡಲೆ ಒಪ್ಪಿಕೊಂಡು ಅವರ ಕಾಲೇಜಿನ ಆಡಿಟೋರಿಯಂನಲ್ಲಿ ನಾಟಕ ಮಾಡಲು ಅವಕಾಶ ಕೊಟ್ಟರು. ಒಂದು ಪಿರಿಯಡ್ ಬಿಡಿಸಿ ಮಕ್ಕಳನ್ನು ನಾಟಕ ನೋಡಲು ಕಳಿಸಿದರು. 300ಕ್ಕೂ ಹೆಚ್ಚಿನ ವಿದ್ಯಾರ್ಥಿಗಳಿಗೆ ನಾಟಕ ಮಾಡಿದೆವು. ಒಂದು ಚೂರು ಶಬ್ದವಿಲ್ಲದೆ ಇಡೀ ನಾಟಕವನ್ನು ವಿದ್ಯಾರ್ಥಿಗಳು ನೋಡಿ ಮೆಚ್ಚುಗೆ ವ್ಯಕ್ತ ಪಡಿಸಿದರು. ನಾಟಕ ಮುಗಿದ ಮೇಲೆ ಮಕ್ಕಳನ್ನು ಕೇಳಿದೆ. ಅಪರೂಪಕ್ಕೆ ಬಾದಲ್ ಸರ್ಕಾರ ನಮ್ಮೊಟ್ಟಿಗಿದ್ದಾರೆ. ನಾವು ರಂಗಭೂಮಿಗೆ ಪ್ರೇರಿತರಾದದ್ದು ಅವರಿಂದ, 25 ವರ್ಷ ಗಳಿಗಿಂತಲೂ ಹೆಚ್ಚು ಕಾಲದಿಂದ ರಂಗಭೂಮಿಯಲ್ಲಿ ನಾಟಕ ಕಾರರಾಗಿ, ನಿರ್ದೇಶಕರಾಗಿ, ನಟರಾಗಿ ತೊಡಗಿಸಿ ಕೊಂಡಿದ್ದಾರೆ. ಇತ್ತೀಚೆಗೆ ಕೇಂದ್ರ ಸಾಹಿತ್ಯ ಅಕಡಮಿಯವರು ನೀಡದ ಫೆಲೋಶಿಪ್ ಅನ್ನು ಪೊಕ್ರಾನ್‌ನಲ್ಲಿ ಅಣುಬಾಂಬ್ ಪರೀಕ್ಷೆ ನಡೆಸಿದ್ದನ್ನು ವಿರೋಧಿಸುವ ಸಲುವಾಗಿ ಹಿಂತಿರುಗಿಸಿದರು, ಅವರಿಂದ ನಾವು ಕಲಿತದ್ದು ಬಹಳ, ಇಂತಹ ವ್ಯಕ್ತಿ ನಿಮ್ಮೊಂದಿಗೆ ಮಾತನಾಡಲಿ ಅಂತ ಬಯಸ್ತಿನಿ ನೀವು ಒಪ್ಪಿಗೆ ಕೊಡುದಾದ್ರೆ

ಎಂಥ ವಿದ್ಯಾರ್ಥಿಗಳೆಲ್ಲ ಒಕ್ಕೂರಲಿನಿಂದ ಆಗಲಿ ಅಂದರು. ಅಲ್ಲಿಯವರೆಗೆ ಪ್ರೇಕ್ಷಕರಲ್ಲಿ ಪ್ರೇಕ್ಷರಾಗಿ ಮೌನವಾಗಿ ಕೊತು ನೋಡಿದ ಬಾದಲ್ ಅವರು ಎದ್ದು ಬಂದರು. ನಾನು ಏನನ್ನಾದರೂ ಹೇಳುವ ಮೊದಲು ನನ್ನ ಇಬ್ಬರು ಸ್ನೇಹಿತರು ಬರಬೇಕು ಎಂದು ನಮ್ಮನ್ನು ಸಮೀಪ ಕರೆದು ನಮ್ಮಬ್ಬರ ಕೈಗಳನ್ನು ಹಿಡಿದೆತ್ತಿ First of all I want to congradulate my two mad friends who have done their job wonderfully" ಎಂದು ಹೇಳಿ ನಂತರ ಅಣುಬಾಂಬ್ ಎಂತಹ ಅಮಾನವೀಯವಾದದ್ದು ಅದನ್ನು ಏಕೆ ವಿರೋಧಿಸಬೇಕು ಎಲ್ಲವನ್ನು ಚುಟುಕಾಗಿ ಹೇಳಿ ಮುಗಿಸಿದರು. ಅವರು ಆತ್ಮೀಯವಾಗಿ ನಮ್ಮನ್ನು ಶ್ಲಾಘಿಸಿ ನಮಗೊಂದು ಹೆಮ್ಮೆಯ ವಿಷಯ. I was on the top of the world!

ಭಾಷೆ ತಿಳಿಯದ ಜನರಿಗೆ ಹೈದ್ರಾಬಾದಿನಲ್ಲಿ (women studies conferenceನಲ್ಲಿ) ನಾಟಕ ಮಾಡಿದೆವು. ಭಾಷೆಯನ್ನು ಮೀರಿ ನಮ್ಮ ನಾಟಕ ಜನರನ್ನು ತಲುಪಿತು. ನಾಟಕದ gist ಅನ್ನು ಮಾತ್ರ ಇಂಗ್ಲೀಷ್‌ನಲ್ಲಿ ಬರೆದು ಹಂಚಿದ್ದೆವು. ನಾಟಕ ನೋಡಿದವರು "Language was not a barrier at all, It was very well conveyed through acting we were in tears" ಎಂದರು. ನಾಟಕ ಮಾಡುವ ಮೊದಲು ಅರ್ಥವಾಗುವುದೇ ಎಂಬ ಅಳುಕಿತ್ತು. ನಾಟಕವನ್ನು ಮೌನವಾಗಿ ದಿಟ್ಟಿಸಿ ನೋಡುತ್ತಿದ್ದುದನ್ನು ನೋಡಿ ನಿರಾಳವಾಗಿ ನಾಟಕ ಮುಗಿಸಿದೆವು.

ನಾವು ಮಾಡಿದ ಇಪ್ಪತ್ತೈದು ಪ್ರದರ್ಶನಗಳಲ್ಲಿ ಸಿಕ್ಕ ಕೆಲವು ಪ್ರತಿಕ್ರಿಯೆಗಳು ನಮ್ಮನ್ನು ಘಾಸಿಗೊಳಿಸಿದ ಕಾರಣಕ್ಕೆ ನೆನಪಿನಲ್ಲಿ ಉಳಿಯುವಂತಹವು.

ಕುಶಾಲನಗರದ ಮತ್ತೊಂದು ಹೈಸ್ಕೂಲಿನಲ್ಲಿ ನಾಟಕ ಮಾಡುತ್ತಿದ್ದಾಗ ಕೆಲ ಹುಡುಗರು ನಡು ನಡುವೆ ನಮ್ಮ ಸಂಭಾಷಣೆಗೆ ಪ್ರತಿಕ್ರಿಯಿಸುತ್ತಿದ್ದರು. ತಾಯಿ ಮಗಳ ಹೆಣವನ್ನು ಎಳೆದೊಯ್ಯುವಾಗ ನಗುತ್ತಿದ್ದರು. ಅಣ್ಣ ಮನೆಗೆ ಬಂದು ತಂಗಿಗಾಗಿ ಕೇಳಿದಾಗ ಅವಳು ಗೋಟಕ್ ಎನ್ನುತ್ತಿದ್ದರು. ನಡುವೆ ನಾಟಕ ನಿಲ್ಲಿಸಬೇಕೆನಿಸಿತು. Disturb ಆಗಬಾರದೆಂದು ನಾಟಕ ಆಡಿ ಮುಗಿಸಿದೆವು. ನಾಟಕ ಮುಗಿದ ಮೇಲೆ ನೇರವಾಗಿ ಹುಡುಗರನ್ನೆ ಕೇಳಿದೆವು, ನೀವು ಈ ರೀತಿ ಪ್ರತಿಕ್ರಿಯಿಸಿದ್ದಕ್ಕೆ ಕಾರಣವೇನು? ನಕ್ಕ ಕಾರಣವೇನು? ನಿಮ್ಮ ಮೇಲಿನ ಸಿಟ್ಟಿಗೆ ಕೇಳುತ್ತಿಲ್ಲ ಕಾರಣವಿದ್ದರೆ ಹೇಳಿ ನಾವು ಅದಕ್ಕೆ ಗಮನ ನೀಡುತ್ತೇವೆ ಎಂದೆವು ಎಲ್ಲರೂ ಮೌನವಾಗಿ ಕೂತರು, ನಾವು ಈ ರೀತಿ ಪ್ರಶ್ನಿಸಬಹುದೆಂದು ಅವರು ನಿರೀಕ್ಷಿಸಿರಲಿಲ್ಲ. ಒಬ್ಬ ಹುಡುಗ ಎದ್ದು ಬಂದು ತೊಂದರೆಯಾದದ್ದಕ್ಕೆ ಕ್ಷಮಿಸಿ ಎಂದ.

ಮಂಗಳೂರಿನ ರೋಶನಿ ಕಾಲೇಜಿನಲ್ಲಿ ನಾಟಕವಾದ ಮೇಲೆ ವಿದ್ಯಾರ್ಥಿಗಳೊಂದಿಗೆ ಮಾತನಾಡಿದೆವು. ನಾಟಕ ಕುರಿತು ಅಭಿಪ್ರಾಯ ತಿಳಿಸಿ ಎಂದು ಕೇಳಿದೆವು. ಒಬ್ಬ ಹುಡುಗ ಎದ್ದು ಬಂದು "ಅಮೆರಿಕಾದವರು ಬಾಂಬ್ ಹಾಕಿ ಜಪಾನಿಯರಿಗೆ ಪಾಠ ಕಲಿಸಿದರು, ಬಾಂಬ್ ಹಾಕಿದ್ದರಿಂದ ಯುದ್ಧ ನಿಂತಿತು ಇಲ್ಲದಿದ್ದರೆ ಇನ್ನೂ ಮುಂದುವರೆಯುತ್ತಿತ್ತು. ನಾಟಕದಲ್ಲಿ ತಾಯಿ ಮಗನನ್ನು ಹೋಗು ಹೆಣ ಉರುಳಿಸು ಹೋಗು ಎನ್ನುವುದು ಸರಿಯಲ್ಲ, ದೇಶಕ್ಕಾಗಿ ಹೋರಾಡುವುದನ್ನು discourage ಮಾಡುತ್ತೀರಿ, ಯುದ್ಧ ಅನಿವಾರ್ಯ ಮಹಾ ಭಾರತದ ಕಾಲದಿಂದಲೂ ಇದೆ" ಎಂದ. ಶಾಕ್ ಹೊಡೆದಂತಾಯಿತು ನಮಗೆ. ಹಿರೋಶಿಮಾ, ನಾಗಾಸಾಕಿ ದುರಂತವನ್ನು ಸಮರ್ಥಿಸಿಕೊಂಡಿದ್ದನ್ನು ಮೊಟ್ಟ ಮೊದಲ ಬಾರಿಗೆ ನಾನು ಕೇಳಿದ್ದು. ಯಾರಿಗೆ ಪಾಠ ಕಲಿಸಲು ಯಾರನ್ನು ಬಲಿ ತೆಗೆದುಕೊಂಡರು? ಪಾಠ ಕಲಿಸಿದ್ದು at what cost? ಏನೂ ತಪ್ಪು ಮಾಡದ ಮಕ್ಕಳು ಊನವಾಗಿ ಹುಟ್ಟುವುದು ಬಾಂಬ್‌ನ ಪರಿಣಾಮವೆಂದು ಎಲ್ಲರಿಗೂ ಗೊತ್ತಿರುವ ಸತ್ಯ. ಎಷ್ಟು ಸಭೆಗಳಲ್ಲಿ ಮಕ್ಕಳ ವಿಷಯ ಎತ್ತಿದಾಗ ಎಂತಹವರು ಉತ್ತರ ನೀಡದೆ ಮೌನವಾಗುತ್ತಾರೆ, ನೇರವಾಗಿ ಅಮೆರಿಕಾದವರ ಕ್ರೌರ್ಯವನ್ನ ಯಾರು ಸಮರ್ಥಿಸಿಕೊಂಡಿದ್ದನ್ನು ಕೇಳಿರಲಿಲ್ಲ. ಯಾವುದೇ ಅಳುಕಿಲ್ಲದೆ ನೇರವಾಗಿ ಆ ಹುಡುಗ ಹೇಳಿದ್ದನ್ನು ಕೇಳಿ ಗರಬಡಿದಂತಾಗಿತ್ತು. ಯುದ್ಧಕ್ಕೆ ಯಾವ Rationa-lityಯೂ ಇಲ್ಲ. ಅದು ಮನಷ್ಯರ ಅಧಿಕಾರ, ಅಹಂಕಾರದಿಂದ ಹುಟ್ಟಿಕೊಂಡದ್ದು. ಅದನ್ನ ನಾವು ಯಾವತ್ತೂ ಸಮರ್ಥಿಸಿ ಕೊಳ್ಳೆವು. ಈ ಭೂಮಿ ನಮ್ಮ ಮಕ್ಕಳಿಂದ ನಾವು ಪಡೆದು ಕೊಂಡಿರುವ ಸಾಲ ಎನ್ನುವ ಮಾತನ್ನು ನಾವು ನಂಬುತ್ತೇವೆ. ಅದನ್ನು ಕ್ಷೇಮವಾಗಿ ಮಕ್ಕಳಿಗೆ ಬಿಡಬೇಕು. ಮಕ್ಕಳು ಆರೋಗ್ಯವಾಗಿ, ನೆಮ್ಮದಿಯಿಂದ ಬದುಕ ಬೇಕೆನ್ನುವುದು ನಮ್ಮ ಆಶಯ. ಯುದ್ಧವನ್ನು ವಿರೋಧಿಸು ತ್ತೇವೆ. ಯುದ್ಧವಿಲ್ಲದ ಭೂಮಿಯ ಬಗ್ಗೆ ಕನಸು ಕಾಣುವುದನ್ನು ಎಂದಿಗೂ ನಿಲ್ಲಿಸುವುದಿಲ್ಲ ಎಂದೆವು.

ಬೆಂಗಳೂರಿನ ರಾಜರಾಜೇಶ್ವರಿ ನಗರದಾಚೆ ಇರುವ ಭವ್ಯ ರೆಸಾರ್ಟ್ ಒಂದರಲ್ಲಿ Service civil international ಎಂಬ ಸಂಸ್ಥೆಯವರು ಸೇವೆ ಮಾಡಿರುವ ಸಂಸ್ಥೆಯ ಸದಸ್ಯರಿಗೆ ಸನ್ಮಾನ ಇಟ್ಟುಕೊಂಡಿದ್ದರು. ಅಲ್ಲಿ ನಮ್ಮ ನಾಟಕ ಆಡಲು ಕರೆದಿದ್ದರು.

ಗುಡ್ಡದ ಮೇಲಿನ ಆ ಭವ್ಯ Resortಗೆ ಹೋಗುತ್ತಿರುವಾಗಲೇ ಅಳುಕು ಶುರುವಾಯಿತು. ಆ ಜಾಗಕ್ಕೆ ನಾವು ಸಲ್ಲುವವರಲ್ಲ ವೆನಿಸತೊಡಗಿತು. ಎಲ್ಲರ ಸನ್ಮಾನಗಳು ಮುಗಿದವು. ಶಾಲಾ ಮಕ್ಕಳಿಗೆ ಕೈ, ಮುಖದ ಮೇಲೆ ಭಾರತದ ಬಾವುಟ ಪೇಂಟ್ ಮಾಡಿಸಿ ಪಾಪ್ ದೇಶ ಭಕ್ತಿಗೀತೆಗೆ ಕುಣಿಸಿದರು. ಸಾಂಪ್ರದಾಯಿಕ ನೃತ್ಯವೆಂದು ತಮಿಳು ಸಿನಿಮಾ ಹಾಡಿಗೆ ಇಬ್ಬರು ಪುಟಾಣಿಗಳ ಕೈಲಿ ಭರತನಾಟ್ಯ ಮಾಡಿಸಿ the great Indian traditional dance ಎಂದು ಹೊಗಳಿದರು. ಇನ್ನೊಂದು ಯಕ್ಷಗಾನದ ಕಾರ್ಯಕ್ರಮ ಇತ್ತು. ಅದಕ್ಕೆ ಮೊದಲು ನಮ್ಮ ನಾಟಕ ಮಾಡಲು ಹೇಳಿದರು. ಮಾಡುವುದಕ್ಕೆ ಮೊದಲೇ ನಾಟಕ 40 ನಿಮಿಷದ್ದಾ? ಕನ್ನಡದ ನಾಟಕಾನಾ? Foriegn deligatesಗೆ ಬೋರ್ ಆಗುತ್ತೆ, ನಾಟಕ cut ಮಾಡಿ ಮಾಡಿ ಎಂದೆಲ್ಲಾ ಪ್ರಶ್ನಿಸಿದರು. ಅಂತೂ ನಾಟಕ ಪ್ರಾರಂಭವಾಗಿ 5 ನಿಮಿಷವಾಗಿಲ್ಲ ಆಗಲೇ ಒಬ್ಬ ಸಂಘಟಕ sideಗೆ ಬಂದು (ನಾಟಕ ಮಾಡುವಾಗ ರಂಗದ ಮೇಲೆ ಬರಬಾರದೆನ್ನುವ Manners ಸಹ ಇಲ್ಲದವ) ಇನ್ನೂ ಎಷ್ಟು ಹೊತ್ತು ಬೇಗ ಮುಗಿಸಿ ಎಂದು ಬಂದು ಹೇಳಿದ. ಮತ್ತೊಬ್ಬ ಸಂಘಟಕ ದೂರದಿಂದಲೇ (atleast stageನ ಮೇಲೆ ಬರಬಾರದೆನ್ನುವ ಮರ್ಯಾದೆ ಇದ್ದವ) ವಾಚಿನ ಕಡೆಗೆ ತೋರಿಸಿ ಬೇಗ ಮುಗಿಸಿ ಎಂದ, ಇನ್ನು ನಾಟಕ ಮುಂದುವರೆಸಬಾರದೆಂದುಕೊಂಡೆವು. ಚಿತ್ರ ಮೈಕ್ ಬಳಿ ಬಂದು ನಾಟಕ ನಿಲ್ಲಿಸುತ್ತಿದ್ದೇವೆ, ಯಾಕೆಂದ್ರೆ ಸಂಘಟನಕಾರರು ಬೇಡವೆನ್ನುತ್ತಿದ್ದಾರೆ ಎಂದು ಹೇಳಿದಳು. ಒಬ್ಬ ಮಹಿಳೆ why are you stopping continue ಎಂದು ಕೂಗುತ್ತಲೇ ಇದ್ದಳು. ಹತ್ತಿರ ಬಂದು ಯಾಕೆ ನಿಲ್ಲಿಸಲು ಹೇಳುತ್ತಿದ್ದಾರೆ ಎಂದು ಕೇಳಿದರು. Organisersನೇ ಕೇಳಿ. ಈ ರೀತಿ ನಾಟಕಕ್ಕೆ ಅವಮಾನ ಮಾಡುವುದನ್ನು ಇದೇ ಮೊದಲ ಸಲ ನೋಡುತ್ತಿರುವುದು. ಕಲೆ ಅಂದ್ರೆ ಏನೆಂದು ತಿಳಿಯದ ಅನಾಗರಿಕರು ಎಂದು ಹೇಳಿ ನಮ್ಮ Properties ತೆಗೆದುಕೊಂಡು ಅವರ ಗಾಡಿಗೂ ಕಾಯದೆ, ಊಟವನ್ನೂ refuse ಮಾಡಿ ಹೊರಟೆವು. ಕಾರ್ಯಕ್ರಮದಲ್ಲಿ ಸನ್ಮಾನಿತರಾದವರೊಬ್ಬರ ಕಾರು ಹೊರಟಿತ್ತು. ಅವರು ಮುಖ್ಯ ರಸ್ತೆಗೆ ಬಿಡುತ್ತೇವೆಂದರು. ಮುಖ್ಯರಸ್ತೆಗೆ ಬಂದು ಆಟೋದಲ್ಲಿ ಮನೆಗೆ ಬಂದೆವು.

ವಿಪರ್ಯಾಸವೆಂದರೆ ಆ ಸಂಸ್ಥೆ ಹುಟ್ಟಿಕೊಂಡಿದ್ದು 2ನೇ ಮಹಾಯುದ್ಧದ ಸಂದರ್ಭದಲ್ಲಿ ನೋವುಂಡವರ ಸೇವೆಗೆಂದು. ಆದರೆ ಅಲ್ಲಿ ನಾವು ಕಂಡದ್ದು ಬಿಡುವಿನ ವೇಳೆಯಲ್ಲಿ ಶೋಕಿಗಾಗಿ ಸಮಾಜ ಸೇವೆ ಮಾಡುವ ಜನರನ್ನ. ಸನ್ಮಾನದ ಸಮಾರಂಭದಲ್ಲಿ ಊಟಕ್ಕೆ ಪಕ್ಕದಲ್ಲಿ ಉಪ್ಪಿನಕಾಯಿಯಂತೆ ಇವರಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ಬೇಕು. ಅದು ಚಿಕ್ಕದಾಗಿ colourful ಆಗಿ, bore ಆಗದಂತಿರುವ ಕಾರ್ಯಕ್ರಮಗಳು. How can suffering & death be colourful & boring?

ನಮ್ಮ ಅನುಭವದಲ್ಲಿ ಬೆಂಗಳೂರಿಗಿಂತ ಹೊರಗಿನ ಸಣ್ಣ ಪುಟ್ಟ ಊರುಗಳಲ್ಲಿ ಒಳ್ಳೆಯ ಪ್ರತಿಕ್ರಿಯೆ ಸಿಕ್ಕಿತು. ಟಿ.ವಿ., ವಿಡಿಯೊ, ಸಿ.ಡಿ. ಇತ್ಯಾದಿಗಳ ಹಾವಳಿಯ ನಡುವೆಯೂ ನಾಟಕ ಜೀವಂತವಾಗಿರಬಲ್ಲದೆಂಬುದನ್ನು ಕಂಡುಕೊಂಡೆವು. ದುಡ್ಡು ಹೆಚ್ಚು ಖರ್ಚು ಮಾಡಿದರೆ ನಾಟಕ ಚೆನ್ನಾಗಿ ಮಾಡಬಹುದೆನ್ನುವುದು ಸರಿಯಲ್ಲ. Minimum ಹಣದಲ್ಲಿ ಚೆನ್ನಾಗಿರೊ ನಾಟಕವನ್ನು ಮಾಡೋದು ಸಾಧ್ಯ, ಜನ ಅದನ್ನು ಸ್ವೀಕರಿಸುತ್ತಾರೆ ಅನ್ನೋದು ಮನದಟ್ಟಾಯ್ತು. ಜನರಿಂದ ನೆನಪಿನಲ್ಲಿ ಉಳಿಯುವಂತ ಪ್ರತಿಕ್ರಿಯೆ ಸಿಕ್ಕಿದ್ದು ನಮಗೆ ಸಿಕ್ಕ ಬಹುದೊಡ್ಡ Award. ಜನ ನಾಟಕವೆಂಬ ವಿಸ್ಮಯಕ್ಕೆ ನಿಜಕ್ಕೂ ರೆಕ್ಕೆ ಕಟ್ಟಿದರು. ನಮ್ಮ ಪ್ರಯತ್ನದಲ್ಲಿ ನಮ್ಮೊಂದಿಗಿದ್ದ ಸ್ನೇಹಿತರು ನಮ್ಮ ಉತ್ಸಾಹಕ್ಕೆ ರೆಕ್ಕೆ ಕಟ್ಟಿದರು. ರೆಕ್ಕೆ ಕಟ್ಟಿ ಹಾರುವ ಹುಮ್ಮಸ್ಸು ಮೂಡಿಸಿದವರೆಲ್ಲರಿಗೂ ನಾವು ಋಣಿಗಳು.

O *ಸರಸ್ವತಿ ದು.*

ಕೆಲವೊಮ್ಮೆ ಸರಳ ವಿಷಯಗಳೂ ನಮಗೆ ಹೊಳೆದೇ ಇರುವುದಿಲ್ಲ. ನಾಟಕ ಎಂದರೆ ಒಂದು ಜೀವಂತ ಪ್ರದರ್ಶನ (Live show), ಸಿನಿಮಾ ಹಾಗಲ್ಲ. ಸಿನಿಮಾಕ್ಕೆ ತೆರೆಯಮೇಲೆ ಮಾತ್ರ ಜೀವವಿರುತ್ತದೆ. ರಂಗಭೂಮಿ 'ಈಗ ಮತ್ತು ಇಲ್ಲೇ' ಇರುವಂಥಹದ್ದು. ಸಿನಿಮಾದಲ್ಲಿ ಏನನ್ನು ಬೇಕಾದರೂ ತೋರಿಸಬಹುದು. ಮುಳುಗುವ ಹಡಗು, ಉರಿಯುತ್ತಿರುವ ಕಟ್ಟಡಗಳ ಚಿತ್ರವನ್ನು ತೋರಿಸಬಹುದು. ಆದರೆ ಅವೆಲ್ಲ ಚಿತ್ರಗಳಾಗಿ ಮಾತ್ರ ಉಳಿಯುತ್ತವೆ. ನಾಟಕ ಹಾಗಲ್ಲ, ಅದರಲ್ಲಿ ಏನೇನು ಆಗುತ್ತಿವೆಯೋ ಅದೆಲ್ಲ ಈಗಲೇ ಆಗುತ್ತಿರುವಂಥಹದ್ದು. ನಮ್ಮ ಕಣ್ಣೆದುರಿಗೇ ಆಗುತ್ತಿರುವಂಥಹದ್ದು. ಇದು ನೇರವಾಗಿ ನಮ್ಮನ್ನು ತಲುಪುವ ಸಂವೇದನೆ.

*-ಬಾದಲ್ ಸರ್ಕಾರ್*

# "ಹೆಣ್ಣಲ್ಲವೇ"

ಂ ಲಕ್ಷ್ಮೀ ಚಂದ್ರಶೇಖರ್

ಹೆಣ್ಣು ಮಕ್ಕಳು ನಾಟಕ ಮಾಡೋದಿರಲಿ, ನೋಡೋದೂ ಪಾಪ ಅನ್ನೋ ಕಾಲಾನೂ ಒಂದಿತ್ತು. ಈಗಲೂ ಹೆಣ್ಣು ಪಾತ್ರಗಳು ಹೆಚ್ಚಿರೋ ನಾಟಕ ಕೈಗೆ ತಗೋಳೋದಿಕ್ಕೆ ತಂಡಗಳು ಹಿಂದೆ ಮುಂದೆ ನೋಡುತ್ತವೆ. ಕಷ್ಟಪಟ್ಟು ಹೆಣ್ಣು ಮಕ್ಕಳನ್ನ ಹುಡುಕಿಕೊಂಡು ಬಂದರೂ, ಅವರು ಆ ನಾಟಕದ ಮುಂದಿನ ಪ್ರದರ್ಶನಗಳಿಗೆ ಸಿಗುತ್ತಾರೆ ಎನ್ನುವುದು ಅನುಮಾನ. ಕಾರಣ? ದಿನಾ ರಿಹರ್ಸಲ್‌ನಿಂದ ರಾತ್ರಿ ಲೇಟಾಗಿ ಮನೆಗೆ ಬರುವುದರ ಬಗ್ಗೆ ಆ ಹೆಣ್ಣುಗಳ ಮನೆಯಲ್ಲಿ ಗಲಾಟೆ ಪ್ರಾರಂಭ ವಾಗಿರುತ್ತದೆ. ನಾಟಕದಲ್ಲಿ ಗಂಡಸರ ಜೊತೆ ಸಲಿಗೆಯಿಂದ ನಡೆದುಕೊಂಡು ಹೆಣ್ಣುಮಕ್ಕಳು ಹಾಳಾಗಿಬಿಡುತ್ತಾರೆ ಅನ್ನೋ ಭಯ ಬೇರೆ. ಮದುವೆಯಾಗಿದ್ದರೆ ಗಂಡ, ಮಕ್ಕಳ ಯೋಚನೆ, ಮನೆಯ ಜವಾಬ್ದಾರಿ. ಈ ತೊಂದರೆಗಳ ಅರಿವಿರೋದ್ರಿಂದಲೋ ಏನೋ ಹೆಚ್ಚಿನ ನಾಟಕಕಾರರು ಹೆಣ್ಣು ಪಾತ್ರಗಳ ಮೇಲೆ ನಿಂತಿರೋ ನಾಟಕಾನೇ ಬರೆಯೋದಕ್ಕೆ ಹೋಗೋದಿಲ್ಲ. ಜೊತೆಗೆ ಪುರುಷ ಪ್ರಧಾನವಾದ ನಮ್ಮ ಸಮಾಜದಲ್ಲಿ ಎಲ್ಲ ದಾರ್ಶನಿಕ ಸಮಸ್ಯೆಗಳೂ ಕಾಡುವುದು ನಾಟಕದ ನಾಯಕನನ್ನೇ ಹೀಗಾಗಿ ನಾನು ಹೈಸ್ಕೂಲಿನ ದಿನಗಳಿಂದಲೂ ನನ್ನನ್ನು ರಂಗಭೂಮಿಯಲ್ಲಿ ತೊಡಗಿಸಿ ಕೊಂಡಿದ್ದರೂ, ನನ್ನಲ್ಲಿ ಸುಪ್ತವಾಗಿದ್ದ ಕಲಾವಿದೆಯನ್ನು ಹೊಡೆದೆಬ್ಬಿಸುವಂತ ಪಾತ್ರಗಳು ಸಿಕ್ಕೇ ಇರಲಿಲ್ಲ. ಅಪರೂಪಕ್ಕೆ ಇಬ್ಸನ್ನಿನ "ನೋರಾ" ಅಥವಾ ಗಾರ್ಕಿಯ 'ತಾಯಿ'ಯ ಪಾತ್ರಗಳು ಬಂದಾಗ ಅವು ಬೇರೆ ಯಾರಿಗೋ ಸಿಕ್ಕಿದ್ದವು.

ಹೀಗೆ ಸಿಕ್ಕ ಸಣ್ಣ- ಪುಟ್ಟ ಪಾತ್ರಗಳಲ್ಲೇ ಸಂತೋಷ ಪಡುತ್ತ ಬಂದಿದ್ದ ನನಗೆ ಒಂದು ಗಂಟೆಯ ಕಾಲ ಒಬ್ಬಳೇ ರಂಗದ ಮೇಲೆ ನಿಲ್ಲಬಲ್ಲೆ ಎಂಬ ನಂಬಿಕೆಯೇ ಇರಲಿಲ್ಲ. ಈ ರೀತಿ ಏಕವ್ಯಕ್ತಿ ರಂಗ ಪ್ರದರ್ಶನವೊಂದನ್ನು ಮಾಡುವ ಸಂದರ್ಭ ಒದಗಿ ಬಂದದ್ದು ಆಕಸ್ಮಿಕವೇ. 1998ರ ಫೆಬ್ರವರಿ ತಿಂಗಳಲ್ಲಿ ಅಮೆರಿಕಾದ ಷಿಕಾಗೋ ನಗರಕ್ಕೆ ಷೇಕ್ಸ್‌ಪಿಯರ್ ಅಧ್ಯಾಪಕರ ಸಮ್ಮೇಳನವೊಂದಕ್ಕೆ ನನ್ನ ಸಹೋದ್ಯೋಗಿ ಜಯಗೌರಿಯೊಂದಿಗೆ ಹೊರಟಿದ್ದೆ. ಅಷ್ಟೊಂದು ದುಡ್ಡು ಖರ್ಚು ಮಾಡಿಕೊಂಡು ಅಷ್ಟು ದೂರ ಹೋಗಿ ಬರೀ ಮೂರು ದಿನದ ಸಮ್ಮೇಳನದಲ್ಲಿ ಭಾಗವಹಿಸಿ ಹಿಂತಿರುಗಲು ಮನಸ್ಸಾಗಲಿಲ್ಲ. ದೇಶ ಸುತ್ತುವುದೆಂದರೆ ಮೊದಲಿನಿಂದಲೂ ಪ್ರೀತಿ. ಜೊತೆಗೆ ಗೆಳತಿ ಜಯಗೌರಿ ಇದ್ದಳು.

ತಂಗಲು ನೆಂಟರು, ಸ್ನೇಹಿತರು, ವಿದ್ಯಾರ್ಥಿನಿಯರ ಮನೆಗಳಿದ್ದವು. ಅಮೆರಿಕಾದಲ್ಲಿ 5-6 ವಾರಗಳ ಕಾಲವಾದರೂ ಇದ್ದು ಅದಷ್ಟೂ ಸ್ಥಳಗಳನ್ನು ನೋಡಿಬರಲು ನಿರ್ಧರಿಸಿದೆವು. ನಮಗೆ ಸ್ವಲ್ಪ ಮಟ್ಟಿಗೆ ತಿಳಿದಿದ್ದ ವಿಷಯಗಳ ಬಗ್ಗೆ ಅಲ್ಲಿನ ವಿಶ್ವವಿದ್ಯಾಲಯಗಳಲ್ಲಿ, ಕನ್ನಡ ಸಂಘಗಳಲ್ಲಿ ಉಪನ್ಯಾಸ ನೀಡುವುದರ ಮೂಲಕ ಜನರನ್ನು ಸಂಧಿಸುವುದು, ಸಾಧ್ಯವಾದರೆ ನಮ್ಮ ಓಡಾಟದ ಖರ್ಚು ಹುಟ್ಟಿಸಿಕೊಳ್ಳುವುದು ನಮ್ಮ ಯೋಜನೆಯಾಗಿತ್ತು.

ಆದರೆ ನಮ್ಮ ದುರಾದೃಷ್ಟಕ್ಕೆ ಅದು ಭಾರತದ ಸ್ವಾತಂತ್ರ್ಯ ಸಂಗ್ರಾಮದ ಸುವರ್ಣ ಮಹೋತ್ಸವದ ವರ್ಷವಾಗಿದ್ದು ಭಾರತದ ಬಗ್ಗೆ ಅಜೀರ್ಣವಾಗುವಷ್ಟು ಉಪನ್ಯಾಸಗಳನ್ನು ಕೇಳಿದ್ದ ಆ ಸಂಸ್ಥೆಗಳು ನಮ್ಮಲ್ಲಿ ಯಾವ ಆಸಕ್ತಿಯನ್ನೂ ತೋರಲಿಲ್ಲ. ಭಾರತದಿಂದ ಅಲ್ಲಿಗೆ ನಾಟಕ ಮಾಡಲು ಹೋದವರ ಸಂಖ್ಯೆ ತೀರ ಕಡಿಮೆ ಇದ್ದದ್ದರಿಂದ, ಒಂದು ರೂಪಕವನ್ನು ಸಿದ್ಧಪಡಿಸಿಕೊಂಡು ಹೋದರೆ ಹೇಗೆ ಎಂದುಕೊಂಡೆ. ಜಯಗೌರಿ ತಾಂತ್ರಿಕ ಸಹಕಾರ ನೀಡಲು ಸಿದ್ಧವಿದ್ದಳು. ಹೊರಡುವುದು ಒಂದೆರಡು ವಾರವಿರುವಾಗ ತುರಾತುರಿಯಲ್ಲಿ ನಾಟಕ ಸಿದ್ಧತೆ ಪ್ರಾರಂಭವಾಯಿತು. 'ಕಲೆಗಾಗಿ ಕಲೆ'ಯಲ್ಲಿ ನಂಬಿಕೆಯಿರದಿದ್ದ ನನಗೆ ಕೇವಲ ರಂಜನೆಗಾಗಿ ನಾಟಕ ಮಾಡುವುದು ಸಾಧ್ಯವಿರಲಿಲ್ಲ. ಹೆಣ್ಣಾದ ನಾನು ಈ ನಾಟಕದ ಮೂಲಕ ಹೆಣ್ಣಿನ ಪರಿಸ್ಥಿತಿಯ ಬಗ್ಗೆ ಏನಾದರೂ ಹೇಳಬೇಕೆನಿಸಿತು. ನಾನು ಅದುವರೆಗೆ ಮಾಡಿದ್ದ, ನೋಡಿದ್ದ ಸ್ತ್ರೀ ಪಾತ್ರಗಳಲ್ಲಿ ಸ್ತ್ರೀ ಶೋಷಣೆಯ ಹಲವು ಮುಖಗಳನ್ನು ತೋರುವ ಕೆಲವನ್ನು ಆರಿಸಿಕೊಂಡು ಅದಕ್ಕೆ 'ಹೆಣ್ಣಲ್ಲವೇ' ಎಂಬ ಹೆಸರು ಕೊಟ್ಟೆ. 'ಸಂಚಿಹೊನ್ನಮ್ಮನ' ಹೆಣ್ಣಲ್ಲವೇ ನಮ್ಮನ್ನೆಲ್ಲಾ ಪೊರೆದವಳು' ಎಂಬ ಪದ್ಯದಿಂದಲೇ ನಾಟಕ ಪ್ರಾರಂಭಿಸಬೇಕೆಂದಿದ್ದೆ. ಆದರೆ ಅದರ tune ಗೊತ್ತಿರದಿದ್ದರಿಂದ ಕೈಬಿಡಬೇಕಾಯಿತು. ನಾಟಕದ ನಿರ್ದೇಶನಕ್ಕೆ ಸಮುದಾಯದ ಗೆಳೆಯರ ಸಹಾಯ ಕೋರಿದೆ. ಆ ತುಣುಕುಗಳನ್ನು ಅರ್ಥಪೂರ್ಣವಾಗಿ ಜೋಡಿಸಿ ನಿರೂಪಣೆ ಬರೆಯುವಲ್ಲಿ ಶಶಿಧರ್ ಭಾರಿಘಾಟ್ ನೆರವಾದರು.

ಅವರೊಂದಿಗೆ ದೇವಾನಂದ್, ಕೃಷ್ಣಕುಮಾರ್‌ಯಾದವ್ ಮತ್ತು ಶ್ರೀವತ್ಸ ಬೇರೆ ಬೇರೆ ತುಣುಕುಗಳನ್ನು ನಿರ್ದೇಶಿಸಿದರು. ಗಜಾನನ ನಾಯಕ ಸಂಗೀತದ ಹೊಣೆ ಹೊತ್ತ. ಹೊರಡುವ ಹಿಂದಿನ ರಾತ್ರಿಯಿಡೀ ಸಮುದಾಯ ಹೌಸಿನಲ್ಲಿ ಕುಳಿತು ಹಾಡುಗಳನ್ನ, ಹಿನ್ನೆಲೆಯ ಧ್ವನಿಗಳನ್ನು ರೆಕಾರ್ಡ್ ಮಾಡಿದ್ದಾಯಿತು. ಸ್ಟುಡಿಯೋ ಬಾಡಿಗೆ ತೆಗೆದುಕೊಂಡು ಮಾಡಲು ಸಮಯ, ಹಣ ಎರಡೂ ಇಲ್ಲದ್ದರಿಂದ ಸಣ್ಣ ಟೇಪ್ ರೆಕಾರ್ಡರ್ ಒಂದರಲ್ಲೇ ರೆಕಾರ್ಡ್ ಮಾಡಿದ್ದಾಯ್ತು. ಅದರ ಗುಣಮಟ್ಟ ಕಳಪೆಯಾಗಿದ್ದರೂ, ಬೇರೇನೂ ದಾರಿಯಿಲ್ಲದ್ದರಿಂದ ಅದನ್ನೇ ಉಪಯೋಗಿಸಬೇಕಾಗಿತು. ಸಮಯದ ಅಭಾವದಿಂದಾಗಿ ಹೆಚ್ಚು ರಿಹರ್ಸಲ್‌ಗಳನ್ನು ಮಾಡಲು ಸಾಧ್ಯವಾಗಿರಲಿಲ್ಲ. ಅಮೆರಿಕಾಕ್ಕೆ ತೆರಳಿದ ಮೇಲೆ ಮಾತುಗಳನ್ನು ಕಲಿತುಕೊಂಡು ನಟನೆಯನ್ನು ಪಕ್ಕಾ ಮಾಡಿಕೊಳ್ಳುವುದು ಎಂದುಕೊಂಡೆವು. ಬಿಳಿಯ ಚೂಡಿದಾರ-ಖಮೀಜಿನ ಮೇಲೆ ಆಯಾ ಪಾತ್ರಕ್ಕೆ ತಕ್ಕ ಬಣ್ಣದ Veilಗಳನ್ನು ಬೇರೆ ಬೇರೆ ರೀತಿಯಲ್ಲಿ ಹೊದ್ದುಕೊಳ್ಳುವುದು ಎಂದಾಯಿತು. ಹಿನ್ನೆಲೆಯಲ್ಲಿ ಇಳಿಬಿಡಲು ಸ್ತ್ರೀ-ಪುರುಷರ ಚಿನ್ಹೆಗಳಿರುವ ಪರದೆಯನ್ನು ಅದನ್ನು ನಿಲ್ಲಿಸಲು ಬೇಕಾಗುವ ಕಬ್ಬಿಣದ frame ಅನ್ನು ದೇವಾನಂದ್ ಸಿದ್ಧಪಡಿಸಿಕೊಟ್ಟರು. ಹಗುರವಾದ ಅಲ್ಯೂಮಿನಿಯಮ್ ಪೈಪ್‌ಗಳನ್ನು ಸೂಟ್‌ಕೇಸಿನಲ್ಲಿ ಇಟ್ಟುಕೊಂಡು ಹೋಗಲು ಸಾಧ್ಯವಾಗುವಂತೆ ಕತ್ತರಿಸಿ frame ಮಾಡಬೇಕೆಂದು ಯೋಚಿಸಿದ್ದ ದೇವ, ಕೊನೆಯ ಗಳಿಗೆಯಲ್ಲಿ ಆ ಪೈಪುಗಳು ಸಿಗದೆ ಹೋದಾಗ ಭಾರವಾದ ನಲ್ಲಿ ಪೈಪುಗಳನ್ನೇ ಉಪಯೋಗಿಸಿದ್ದ. ಅವುಗಳನ್ನು ಹೊತ್ತುಕೊಂಡು ಹೋಗಲು ಅವನು ಸಿದ್ಧಪಡಿಸಿದ್ದ ಚೀಲ ಸುಬ್ರಹ್ಮಣ್ಯ ಸ್ವಾಮಿಯ ಭಕ್ತರು ಕಾವಡಿಗೆ ಬಳಸುವ ಹಳದಿ ಬಣ್ಣದಾಗಿತ್ತು. ಪೈಪುಗಳು ನನ್ನ ಸೂಟ್‌ಕೇಸಿಗಿಂತ ಉದ್ದವಿದ್ದರಿಂದ ಆ ಚೀಲವನ್ನು ನೀಲಿ ಬಣ್ಣದ ನೈಲಾನ್ ಹಗ್ಗದಲ್ಲಿ ಸೂಟ್‌ಕೇಸಿನ ಮೇಲ್ಭಾಗಕ್ಕೆ ಕಟ್ಟಿದ್ದಾಯ್ತು. ಹಳ್ಳಿಯ ಸಂತೆಗೆ ತೆಗೆದುಕೊಂಡು ಹೋಗಲು ಲಾಯಖಾಗಿದ್ದ ಆ ಲಗ್ಗೇಜನ್ನ ನಾನು ಅಮೆರಿಕಾಗೆ ಹೊತ್ತುಕೊಂಡು ಹೋಗುತ್ತಿದ್ದೇನೆ ಎಂದು ನನ್ನ ಮಕ್ಕಳಿಗೆ ನಾಚಿಕೆ. ಪೈಪುಗಳ ಭಾರಕ್ಕೆ ಸೂಟ್‌ಕೇಸು ಕೂಡ ಎತ್ತೆತ್ತಲೋಗುತ್ತಿತ್ತು, ಬೀಳುತ್ತಿತ್ತು. ಅದನ್ನ ಹೊತ್ತುಕೊಂಡು ಅಮೆರಿಕಾ ಸುತ್ತುವದರೊಳಗೆ ಸಾಕುಸಾಕಾಗಿಹೋಯ್ತು.

ನನ್ನ ಮೊದಲ ಪ್ರದರ್ಶನವಿದ್ದದ್ದು ಕ್ಯಾಲಿಫೋರ್ನಿಯಾದ ಸ್ಯಾನ್‌ಹೋಸೆ ನಗರದಲ್ಲಿ. ನನ್ನ ಸಹೋದ್ಯೋಗಿ ಡಾ|| ರೇಣುಕಾರಾಣಿ ಅಲ್ಲಿದ್ದ ತಮ್ಮ ಸಹೋದರ ಮಹೇಶ್ ಅವರಿಗೆ ಹೇಳಿ ಏರ್ಪಾಡು ಮಾಡಿಸಿದ್ದು. ಬಹಳ ಕಡಿಮೆ ಸಮಯದಲ್ಲಿ ಏರ್ಪಡಿಸಿದ್ದರಿಂದ ಸುಮಾರು 50 ಜನ ಮಾತ್ರ ಬಂದಿದ್ದರು. ಜೀವನದಲ್ಲಿ ಮೊದಲ ಬಾರಿಗೆ ಏಕವ್ಯಕ್ತಿ ರಂಗ ಪ್ರದರ್ಶನ ನೀಡುತ್ತಿದ್ದ ನನಗೆ ನಾನು ಮರೆಯದೆ ಎಲ್ಲ ಮಾತುಗಳನ್ನೂ ಒಪ್ಪಿಸಬಲ್ಲೆನೇ, ಪ್ರೇಕ್ಷಕರ ಗಮನವನ್ನು ಒಂದು ಗಂಟೆಯ ಕಾಲ ಹಿಡಿದಿಡಬಲ್ಲೆನೇ ಎಂಬ ಭಯ ಕಾಡುತ್ತಿತ್ತು. ಆದರೆ ಪ್ರದರ್ಶನ ಮುಗಿದು 5 ನಿಮಿಷಗಳಾದರೂ ಕರತಾಡನ ನಿಲ್ಲದಿದ್ದಾಗ ಪುಳಕಿತಳಾದೆ. ಯಾವಾಗಲೂ ಲಘು ಹಾಸ್ಯ ನಾಟಕಗಳನ್ನೇ ನೋಡುತ್ತಾ ಬಂದಿದ್ದ ತಮಗೆ ಇಂತಹ ತೀವ್ರ ಅನುಭವವಾಗಿದ್ದು ಇದೇ ಮೊದಲು ಎಂದು ಅನೇಕ ಪ್ರೇಕ್ಷಕರು ಹೇಳಿದಾಗ ನನ್ನ ಶ್ರಮ ಸಾರ್ಥಕವಾಯಿತು ಎಂದುಕೊಂಡೆ. ಅಮೆರಿಕಾದಲ್ಲಿ ನೀಡಿದ ಉಳಿದ ಮೂರು ಪ್ರದರ್ಶನಗಳು ಚೆನ್ನಾಗೇ ನಡೆದರೂ ಅವುಗಳಲ್ಲಿ ಮೊದಲ ಬಾರಿಯ ಪುಳಕವಿರಲಿಲ್ಲ.

ಯುಗಾದಿ ಹಬ್ಬದ ಸಂದರ್ಭವಾದ್ದರಿಂದ ನ್ಯೂಯಾರ್ಕ್‌ನಲ್ಲಿ, ವಾಷಿಂಗ್‌ಟನ್‌ನಲ್ಲಿ ಹಬ್ಬದ ಕಾರ್ಯಕ್ರಮದೊಂದಿಗೆ ನನ್ನ ಪ್ರದರ್ಶನವೇ ಸೇರಿಕೊಂಡಿತ್ತು. ಇಂತಹ ಸಂದರ್ಭದಲ್ಲಿ ಹೆಚ್ಚು ಜನದ ಗಮನ ಊಟದ ಕಡೆಗೇ ಇರುತ್ತದೆ. ವಾಷಿಂಗ್‌ಟನ್ನಿನಲ್ಲಂತೂ ಭಾಷಣಗಳು ಉದ್ದವಾಗಿ, ನನ್ನ ನಾಟಕ ಆರಂಭವಾಗುವ ಸಮಯದಲ್ಲೇ ಊಟ ಬಡಿಸಲು ಪ್ರಾರಂಭಿಸಿದ್ದರಿಂದ ಅನೇಕ ಜನವೆದ್ದು ಊಟಕ್ಕೆ ನಡೆದುಬಿಟ್ಟರು. ಮೈಕ್ ವ್ಯವಸ್ಥೆ ಸಮಂಜಸವಾಗಿಲ್ಲದ್ದರಿಂದ, ಸ್ಟೇಜು ದೊಡ್ಡದಾಗಿದ್ದು ಪ್ರೇಕ್ಷಕರಿಂದ ಬಹುದೂರವಿದ್ದು ಗಂಭೀರವಾದ ಏಕವ್ಯಕ್ತಿ ಪ್ರದರ್ಶನಕ್ಕೆ ಸೂಕ್ತವಾಗಿದ್ದ ಸಂದರ್ಭವೂ ಅದಾಗಿಲ್ಲದೆ ನನ್ನ ನಾಟಕ ಪೇಲವವಾಗಿಬಿಟ್ಟಿತು. ನಾನು ಅದೇ ನಾಟಕವನ್ನು ಇಂಗ್ಲಿಷ್ ಭಾಷೆಯಲ್ಲಾದರೂ ಮಾಡಿದ್ದರೆ ಅದಕ್ಕೆ ಉತ್ತಮ ಪ್ರೇಕ್ಷಕರು ಸಿಕ್ಕಿರುತ್ತಿದ್ದರು ಎಂದು ಕೊಲಂಬಸ್‌ನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ನನ್ನ ಹಳೆಯ ವಿದ್ಯಾರ್ಥಿನಿ ಅಂಬಿಕಾ ಹೇಳಿದ ಮಾತು ನನ್ನ ಮೇಲೆ ಬಹಳ ಪರಿಣಾಮ ಬೀರಿತು ಹಾಗೂ ಮುಂದೆ ನಾನಿದನ್ನು ಇಂಗ್ಲಿಷ್‌ಗೆ ಭಾಷಾಂತರಿಸಲೂ ಪ್ರೇರಣೆಯಾಯಿತು. ಆದರೆ ಮಾರನೆಯ ದಿನ ನ್ಯೂಯಾರ್ಕಿನಲ್ಲಿ ಯಾರದೋ ಮನೆಯ basementನಲ್ಲಿ ನಡೆದ ಪ್ರದರ್ಶನಕ್ಕೆ ಸಿಕ್ಕ response, ನಡೆದ ಚರ್ಚೆ ಮನಸ್ಸಿಗೆ ಸ್ವಲ್ಪ ಸಮಾಧಾನ ತಂದಿತು. ಹತ್ತಿರದ ನ್ಯೂಜರ್ಸಿಯಲ್ಲಿ ಕೆಲವು ದಿನಗಳ ಹಿಂದೆ ಕೊಟ್ಟ ಪ್ರದರ್ಶನದ ಸುದ್ದಿ ಅಲ್ಲಿಗಾಗಲೇ ತಲುಪಿದ್ದು 'ನನ್ನ ಅಭಿನಯ ಚೆನ್ನಾಗಿದೆ ಆದರೆ ನಾಟಕದ ಭಾಷೆ ಅಷ್ಟು ಸಭ್ಯವಾಗಿಲ್ಲ' ಎಂಬುದು ಅಲ್ಲಿನ ಕೆಲವು ಪ್ರೇಕ್ಷಕರ ಅಭಿಪ್ರಾಯವಾಗಿತ್ತಂತೆ. ಈ ವಿಷಯ ತಿಳಿದಮೇಲೆ, ನಾಟಕಕ್ಕೆ ಮೊದಲು ನಾಲ್ಕು ಮಾತನಾಡಿ ನಂತರ

ಅಭಿನಯಿಸುವುದು ವಾಸಿ ಎನ್ನಿಸಿತು. ಆಗತಾನೇ ಯುಗಾದಿಯ ಬೇವು ಬೆಲ್ಲ ಸೇವಿಸಿದ್ದ ಪ್ರೇಕ್ಷಕರಿಗೆ, ಭಾರತದ ಬಗ್ಗೆ ಹೆಮ್ಮೆ ಪಡುವುದರ ಜೊತೆಗೇ ಅದರ ಬಗೆಗಿನ ಕೆಲವು ಕಹಿ ಸತ್ಯಗಳನ್ನು ತಿಳಿದುಕೊಳ್ಳುವ ಅವಶ್ಯಕತೆಯ ಬಗ್ಗೆ ವಿವರಿಸಿ ನಾಟಕ ಪ್ರಾರಂಭಿಸಿದ್ದರಿಂದ ನಾಟಕದ ನಂತರ ಸ್ತ್ರೀ ಶೋಷಣೆಯನ್ನು ಕುರಿತಾದ ಉತ್ತಮ ಚರ್ಚೆ ಸಾಧ್ಯವಾಯಿತು.

ಭಾರತಕ್ಕೆ ಹಿಂತಿರುಗಿದ ಮೇಲೆ ಬೆಂಗಳೂರಿನ ಹಲವೆಡೆ ಈ ನಾಟಕದ ಪ್ರದರ್ಶನ ನೀಡಿದೆ. ಕನ್ನಡ ನಾಟಕವನ್ನು ಅಪರೂಪಕ್ಕೆ ನೋಡುವ ಅಮೆರಿಕದ ಕನ್ನಡಿಗರನ್ನು ಮೆಚ್ಚಿಸುವಷ್ಟು ಸುಲಭವಲ್ಲ ಬೆಂಗಳೂರಿನ ಪ್ರೇಕ್ಷಕರನ್ನು ಮೆಚ್ಚಿಸುವುದು ಎಂದು ಚೆನ್ನಾಗಿ ಗೊತ್ತಿತ್ತು. ಮೈಸೂರು ಬ್ಯಾಂಕಿನ ಪ್ರಧಾನ ಕಛೇರಿಯ ಆಡಿಟೋರಿಯಂನಲ್ಲಿ ನಾಟಕವಾಡಿದಾಗ ನೋಡಿದ ರಂಗಭೂಮಿಯ ಸ್ನೇಹಿತರು ಮೆಚ್ಚುಗೆಯ ಮಾತುಗಳನ್ನಾಡುತ್ತಲೇ 'ಭಾಷಣ ಸ್ವಲ್ಪ ಜಾಸ್ತಿಯಾಯಿತು' ಅಂದರು. ನಿರೂಪಣೆ ಮಾಡುವಾಗಲಂತೂ ನಾನು ಕುರ್ಚಿಯ ಹಿಂದೆ ನಿಂತು ಕಾಲೇಜಿನಲ್ಲಿ ಪಾಠ ಮಾಡುವಂತೆ ಉಪನ್ಯಾಸ ಮಾಡುತ್ತಿದ್ದೇನೆ ಎಂಬ ನನ್ನ ಅನುಮಾನ ಸರಿಯೆನಿಸಿತು.

ಈ ಮಧ್ಯೆ ಇದನ್ನು ಇಂಗ್ಲೀಷ್‌ಗೆ ಭಾಷಾಂತರಿಸಬೇಕೆಂಬ ನನ್ನ ಇಚ್ಛೆ ತೀವ್ರವಾಗುತ್ತ ಹೋಗಿತ್ತು. ಅದರ ನಿರ್ದೇಶನಕ್ಕೆ ಕಿರಿಯಳಾದರೂ ತನ್ನ ದಕ್ಷ ನಿರ್ದೇಶನದಿಂದ ನನ್ನ ಗಮನ ಸೆಳೆದಿದ್ದ ಸೌಮ್ಯವರ್ಮಳೇ ಸರಿ ಎಂದುಕೊಂಡೆ. ಕನ್ನಡದ ಪ್ರದರ್ಶನ ನೋಡಿದವಳೇ ಸೌಮ್ಯ ನಿರೂಪಕಿಯನ್ನು ಒಂದು ಪಾತ್ರವಾಗಿಸಿದರೆ ನಾಟಕ ಇನ್ನೂ ಅಚ್ಚುಕಟ್ಟಾಗುತ್ತದೆ ಅಂದಳು. ಕೆಲವು ತುಣುಕಗಳನ್ನು ಬದಲಾಯಿಸುವುದು ಮತ್ತು ಪ್ರತಿಯೊಂದು ಪಾತ್ರಕ್ಕೂ ಏನಾದರೂ ವಿಶಿಷ್ಟವಾದ ಪರಿಕರ ಬಳಸುವುದು ಅವಳು ಮೊದಲು ಮಾಡಿದ ಬದಲಾವಣೆಗಳು. ನಿರೂಪಕಿಯಾಗ್ಗಿ ನನಗೆ ಪ್ರತಿ ಪಾತ್ರದ ನಂತರವೂ ಮಾಡಲು ಕೆಲಸಗಳು ದೊರೆತಾಗ, ಆ ಪಾತ್ರ ಹೆಚ್ಚು ಗಟ್ಟಿಯಾಯಿತು. ವರ್ತಮಾನದಿಂದ ಪ್ರತಿ ಪಾತ್ರವನ್ನು ಪ್ರವೇಶಿಸುವ ಮತ್ತು ವರ್ತಮಾನಕ್ಕೆ ಹಿಂತಿರುಗುವ ಕ್ರಿಯೆ ಹೆಚ್ಚು ಸಹಜ ಹಾಗೂ ಅರ್ಥಪೂರ್ಣವಾಯಿತು. ಜೊತೆಗೆ ಮುಖವಾಡಗಳ ಬಳಕೆಯ ಮೂಲಕ ನಾಟಕಕ್ಕೆ ಕಳೆ ಬಂತು. ಪಾತ್ರಗಳ ಸಂಖ್ಯೆಯನ್ನು ಮಿತಗೊಳಿಸಿದ್ದರಿಂದ ನಾಟಕ ಇನ್ನೂ ಬಿಗಿ ಬಂತು.

ನಾವು ಈ ಹೊಸ ಪ್ರದರ್ಶನವನ್ನು ಮೊದಲಿಗೆ ಸಿದ್ಧಪಡಿಸಿದ್ದು ಇಂಗ್ಲಿಷಿನಲ್ಲಿ. ಜುಲೈ 1999ರಲ್ಲಿ ನಾರ್ವೆ ದೇಶದ ಟ್ರಾಮ್ಸೊ ನಗರದಲ್ಲಿ ಹಾಗೂ ಇಂಗ್ಲೆಂಡಿನ ವಾರಿಕ್ ಯೂನಿವರ್ಸಿಟಿಯಲ್ಲಿ ನಡೆಯಲಿದ್ದ ಅಂತರ ರಾಷ್ಟ್ರೀಯ ಮಹಿಳಾ ಸನ್ನಿವೇಶಗಳಲ್ಲಿ ಈ ನಾಟಕ ಪ್ರದರ್ಶಿಸುವ ಇಚ್ಛೆ ತೋರಿ ಅದರ ಸಾರಾಂಶ ಕಳುಹಿಸಿದೆ. ಎರಡೂ ಕಡೆಯಿಂದ ಆಹ್ವಾನ ಬಂದರೂ ಧನಸಹಾಯ ಸಿಗದಿದ್ದ ಕಾರಣ ನಾರ್ವೆಗೆ ಹೋಗುವುದು ಸಾಧ್ಯವಾಗಲಿಲ್ಲ. ವಾರಿಕ್‌ನ ಪ್ರದರ್ಶನಕ್ಕೆ ಬಹಳ ಚೆನ್ನಾಗಿ ಮೂಡಿಬಂತು. ಪ್ರಪಂಚದ ಅನೇಕ ದೇಶಗಳಿಂದ ಬಂದ ಮಹಿಳಾ ಪ್ರಮುಖರು ನಾಟಕ ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಅದೇ ವಿಶ್ವವಿದ್ಯಾಲಯದಲ್ಲಿ ಮಹಿಳಾ ಅಧ್ಯಯನ ಮಾಡುತ್ತಿದ್ದ ಒಬ್ಬ ಕಪ್ಪು ಹುಡುಗಿಯಂತೂ 'ಸಮ್ಮೇಳನದ ಅನೇಕ ಭಾಷಣಗಳನ್ನು ಕಿತ್ತುಹಾಕಿ ನಿಮ್ಮ ಪ್ರದರ್ಶನ ಮಾತ್ರ ಇಟ್ಟಿದ್ದರೆ ಸಾಕಾಗಿತ್ತು. ನಿಮ್ಮ ನಾಟಕ ಅವೆಲ್ಲ ಭಾಷಣಗಳು ಹೇಳಿದ್ದಕ್ಕಿಂತ ಹೆಚ್ಚಿಗೆ ಹೇಳಿತು, ಎಂದಳು. ಆ ಸಮ್ಮೇಳನದಲ್ಲಿ ಉಪನ್ಯಾಸ ಮಾಡಿದವರಲ್ಲಿ ಜರ್ಮೇನ್ ಗ್ರಿಯರ್ ಅಂತಹ ಘಟಾನುಘಟಿಗಳಿದ್ದರು. ನನ್ನ ಪ್ರದರ್ಶನದ ಹಿಂದಿನ ಸಂಜೆ ಸುನೀತಿ ನಾಂ ಜೋಶಿಯ ಕಥಾವಾಚನವಿತ್ತು. ಇಂತಹ ಮಹಾನ್ ವ್ಯಕ್ತಿಗಳ ಹೆಸರಿನ ಜೊತೆಗೆ ನನ್ನ ಹೆಸರೂ ಇದ್ದ ಪೋಸ್ಟರ್ ನೋಡಿದಾಗ ನನಗಾದ ಸಂತೋಷ ಅವರ್ಣನೀಯ.

ನನ್ನ ಮುಂದಿನ ಪ್ರದರ್ಶನವಿದ್ದದ್ದು ನ್ಯೂಕ್ಯಾಸಲ್ ಅಪಾನ್ ಟೈನ್ ನಗರದ ಹತ್ತಿರ ಸ್ಟ್ಯಾನ್‌ಫರ್ಡ್‌ನಲ್ಲಿ. ಅಲ್ಲಿಯ ಭಾರತೀಯ ಸಂಘವೊಂದು ಸ್ಥಳೀಯ ಕೌನ್ಸಿಲ್ಲಿನ ನೆರವಿನಿಂದ ಏರ್ಪಡಿಸಿದ್ದ ಈ ಕಾರ್ಯಕ್ರಮಕ್ಕೆ ಅನೇಕ ಬಿಳಿಯರೂ ಬಂದಿದ್ದರು. ನಾಟಕವನ್ನು ಎಲ್ಲರೂ ಬಹುವಾಗಿ ಮೆಚ್ಚಿಕೊಂಡರು. ಆದರೆ ನನ್ನ ಪ್ರದರ್ಶನ ಏರ್ಪಡಿಸಲು ಕಾರಣಕರ್ತರೂ, ಸಂಸ್ಥೆಯ ಪದಾಧಿಕಾರಿಯೂ ಆದ ಡಾ|| ನಾಥ್ ಅವರಿಗೆ ಸ್ವಲ್ಪ ಕಸಿವಿಸಿಯಾಗಿತ್ತು. ಪರದೇಶದ ಜನದ ಮುಂದೆ ನಮ್ಮಲ್ಲಿ ಪರಂಪರಾಗತವಾಗಿ ನಡೆದು ಬಂದಿರುವ ಸ್ತ್ರೀ ಶೋಷಣೆಯನ್ನು ಬಿಚ್ಚಿಟ್ಟದ್ದರಿಂದ ನಮ್ಮ ಸಂಸ್ಕೃತಿಯ ಬಗ್ಗೆ ಅವರಲ್ಲಿ ಕೀಳು ಭಾವನೆ ಮೂಡಬಹುದು ಎಂದು. ಸಹೃದಯರಾದ ಆತ 'ಇದರ ಜೊತೆಗೇ ನೀವು ಶಕ್ತಿಯುತರಾಗಿ ಗೌರವಕ್ಕೆ ಪಾತ್ರರಾಗಿರುವ ಇಂದಿರಾಗಾಂಧಿ, ಝಾನ್ಸಿರಾಣಿ ಲಕ್ಷ್ಮಿಬಾಯಿ ಇಂತಹವರನ್ನೂ ಏಕೆ ತೋರಿಸಬಾರದು' ಎಂದರು. ಆದರೆ ಅವರ ಮಗಳು ಡಾ|| ಉಮಾ 'ಇದರ ಒಂದು ಅಕ್ಷರವನ್ನೂ ಬದಲಾಯಿಸಬೇಡಿ' ಎಂದರು. ಅನೇಕ ವರ್ಷಗಳಿಂದ ಇಂಗ್ಲೆಂಡಿನಲ್ಲಿಯೇ ನೆಲೆಸಿರುವ ಕೆಲವು ಮಹಿಳೆಯರೂ ಸಹ 'ನಮ್ಮ ಪರಿಸ್ಥಿತಿ ಈಗಲೂ, ಇಲ್ಲೂ ನೀವು ತೋರುವಂತೆಯೇ ಇದೆ' ಎಂದರು. ಡಾ|| ನಾಥ್ ಮಾತು ಒಂದು ರೀತಿಯಲ್ಲಿ ಸತ್ಯವಾದದ್ದೇ.

ಯಾವುದೇ ಬೇರೆ ದೇಶದ ಪ್ರಜೆಗಳ ಮನಸ್ಸಿನಲ್ಲಿ 'ಭಾರತ ಇನ್ನೂ ಹಿಂದುಳಿದ ರಾಷ್ಟ್ರ ಅದಕ್ಕೆ ಅವರು ಈ ರೀತಿ ಪಶುಗಳಂತೆ ವರ್ತಿಸುತ್ತಾರೆ' ಎಂಬ ಅಭಿಪ್ರಾಯ ಮೂಡಿಸುವುದು ನನ್ನ ಉದ್ದೇಶವಾಗಿರಲಿಲ್ಲ. ಅದಕ್ಕೆ ಹೊರ ದೇಶಗಳಲ್ಲಿ ಪ್ರದರ್ಶನದ ನಂತರದ ಚರ್ಚೆಯಲ್ಲಿ 'ನಾನು ಭಾರತೀಯಳಾದ್ದರಿಂದ, ನನ್ನ ಅನುಭವಕ್ಕೆ ಹತ್ತಿರವಾದ ಪಾತ್ರಗಳನ್ನು ತೋರಿಸುತ್ತೇನೆ. ಆದರೆ ಈ ಹೆಂಗೆಳೆಯರು ಪ್ರಪಂಚದ ಎಲ್ಲ ಹೆಣ್ಣುಗಳ ಪ್ರತಿನಿಧಿಗಳು' ಎಂದು ಹೇಳುತ್ತಾ ಬಂದಿದ್ದೇನೆ. ಸೋಜಿಗದ ವಿಷಯವೆಂದರೆ ಈ ಎಲ್ಲ ಸ್ಥಳಗಳಲ್ಲಿ ನಮ್ಮ ಸಂಸ್ಕೃತಿಯ ಪಾವಿತ್ರ್ಯವನ್ನೂ ಎತ್ತಿಹಿಡಿಯುವ ಪ್ರಯತ್ನ ಮಾಡುವವರೆಲ್ಲಾ ಗಂಡಸರೇ. ಮಹಿಳೆಯರು ನಾನು ಹೇಳುವುದನ್ನೆಲ್ಲಾ ಸಂಪೂರ್ಣ ಅನುಮೋದಿಸುತ್ತಾರೆ. ಕೋವೆಂಟ್ರಿ ಯೂನಿವರ್ಸಿಟಿಯಲ್ಲಿ 'ಹೆಣ್ಣಲ್ಲವೇ' ನೋಡಿದ ಭಾರತೀಯ ಪ್ರಾಧ್ಯಾಪಕಿಯೊಬ್ಬರು, 'ಈ ನಾಟಕವನ್ನು ನೀವು ಎಲ್ಲ ಶಾಲೆಗಳಲ್ಲಿ ಸಂಘ ಸಂಸ್ಥೆಗಳಲ್ಲಿ ಆಡಬೇಕು; ವೀಡಿಯೋ ಕೆಸೆಟ್ ಮಾಡಿ ಮಾರಬೇಕು. ನೀವು ಹೇಳುವ ವಿಷಯಗಳು ಎಲ್ಲರನ್ನೂ ತಲುಪಬೇಕು' ಅಂದರು.

ವಿದೇಶದಿಂದ ಹಿಂತಿರುಗಿದ ಮೇಲೆ 'ಹೆಣ್ಣಲ್ಲವೇ' ನಾಟಕವನ್ನು ಅದರ ಹೊಸ ಅವತಾರದಲ್ಲಿ ಅನೇಕ ಕಡೆ ಪ್ರದರ್ಶಿಸಿದ್ದೇನೆ. ಸಾಧಾರಣವಾಗಿ ನಾಟಕದ ನಂತರ ಒಳ್ಳೆಯ ಚರ್ಚೆಯಾಗುತ್ತದೆ. ಇದು ಸ್ತ್ರೀವಾದಿಯೊಬ್ಬಳ ಪ್ರದರ್ಶನ ಎಂದು ಮೊದಲೇ ಗೊತ್ತಿದ್ದರೆ ಬರುವ ಪ್ರೇಕ್ಷಕರೇ ಬೇರೆ ಇರುತ್ತಿದ್ದರೇನೋ. 'ಮಾಯಾಮೃಗ' ಧಾರಾವಾಹಿಯಲ್ಲಿ ನನ್ನನ್ನು ಸಂಪ್ರದಾಯಸ್ಥ ಹೆಣ್ಣಾಗಿ ನೋಡಿದ ಅನೇಕ ಮಂದಿ ನನ್ನನ್ನು ಮುಖತಃ ನೋಡುವ ಆಸಕ್ತಿಯಿಂದ ಪ್ರದರ್ಶನಕ್ಕೆ ಬರುತ್ತಿದ್ದರು. ಹಾಗಾಗಿ ಚರ್ಚೆಗೆ ಬಿಸಿಯೇರುತ್ತಿತ್ತು. ಸಾಗರದಲ್ಲಂತೂ ನಾಟಕ ಮುಗಿದು ಒಂದು ಗಂಟೆ ಚರ್ಚೆ ಯಾದರೂ, ಕೂರಲು ಸ್ಥಳವಿಲ್ಲದೆ ಕಿಟಕಿ-ಬಾಗಿಲುಗಳ ಬಳಿ ನಿಂತು ನೋಡುತ್ತಿದ್ದ ಪ್ರೇಕ್ಷಕರು ಅಲುಗಾಡಲಿಲ್ಲ. ಪ್ರೇಕ್ಷಕರೊಬ್ಬರು ತಮ್ಮ ಪಕ್ಕದಲ್ಲಿದ್ದವರಿಗೆ 'ಸಧ್ಯ, ಇವತ್ತು ಮನೆಯಲ್ಲಿ ನನ್ನ ಹೆಂಡತಿಗೆ ಸ್ವಲ್ಪ ಕೆಲಸ ಮಾಡಿಕೊಟ್ಟಿದ್ದೇನೆ. ಧೈರ್ಯವಾಗಿ ಮನೆಗೆ ಹೋಗಬಹುದು' ಅನ್ನುತ್ತಿದ್ದರಂತೆ. ನನ್ನ ಮಿತ್ರರು 'ಏನ್ರಿ, ನಮ್ಮೂರಿನಲ್ಲಿ ಒಂದು ಕ್ರಾಂತಿಯನ್ನೇ ಮಾಡಿಬಿಟ್ಟಿರಿ!' ಎಂದು ಚುಡಾಯಿಸಿದ್ದುಂಟು. ನಾಟಕವೊಂದರಿಂದ ಸಾಮಾಜಿಕ ಕ್ರಾಂತಿಯಾಗುವುದು ಅಸಾಧ್ಯವಿದ್ದರೂ, ಜನರನ್ನು ಸ್ವಲ್ಪಮಟ್ಟಿಗೆ ವಿಚಾರ ಮಾಡಲು ಪ್ರಚೋದಿಸುತ್ತದೆ ಎಂಬುದಂತೂ ನಿಜ. ಇದು ಸಮಾಜ ಪರಿವರ್ತನೆಯ ಮೊದಲ ಹಂತ.


ಹೆಗ್ಗೋಡಿನ ನೀನಾಸಂ ಸಂಸ್ಥೆಯಲ್ಲಿ ನಾಟಕವಾಡಿದ ನಂತರ, ಎಂದಿನಂತೆ ಬರೀ ಗಂಡಸರೇ ಪ್ರಶ್ನೆ ಕೇಳುತ್ತಿದ್ದದ್ದನ್ನು ಕಂಡು ಸುಬ್ಬಣ್ಣನವರು ಅಲ್ಲಿ ಕುಳಿತ ಹುಡುಗಿಯೊಬ್ಬಳನ್ನು 'ನಿಮಗೇನೂ ಕೇಳುವುದಿಲ್ಲವಾ?' ಎಂದರು. ಅದಕ್ಕವಳು 'ನಾವೇನು ಕೇಳುವುದು, ಸಾರ್. ನಮ್ಮೆಲ್ಲರ ಪರವಾಗಿ ಅವರೇ ಎಲ್ಲವನ್ನೂ ಹೇಳಿಬಿಟ್ಟಿದ್ದಾರೆ' ಎಂದು ಉತ್ತರಿಸಿದಳು. ನನ್ನೂರು ಚನ್ನರಾಯ ಪಟ್ಟಣದಲ್ಲಿ ಪ್ರದರ್ಶನ ಮುಗಿದ ನಂತರ ಗಂಡಸರೊಬ್ಬರು ತೀವ್ರವಾದ ಚರ್ಚೆಗಿಳಿದರು. 'ಇಂದು ಮಹಿಳೆ ಶೋಷಿತಳಲ್ಲ. ಅವಳಿಗೆ ಸಾಕಷ್ಟು ಸ್ವಾತಂತ್ರ್ಯ ಸಿಕ್ಕಿದೆ' ಎಂದು ವಾದಿಸಿದರು. ನನ್ನ ಮಾತುಗಳು ಅವರಿಗೆ ಸಮಾಧಾನ ಕೊಡಲಿಲ್ಲ. ಕೊನೆಗೆ ನಾನು 'ನನ್ನ ಮಾತಿನ ಸತ್ಯವನ್ನು ಸಾಬೀತು ಮಾಡಿತೋರಿಸುತ್ತೇನೆ. ತಡೆಯಿರಿ' ಎಂದವಳೇ ಪ್ರೇಕ್ಷಕರಲ್ಲಿ ಹೆಚ್ಚು ಸಂಖ್ಯೆಯಲ್ಲಿದ್ದ ಮಹಿಳೆಯರನ್ನು ಕೇಳಿದೆ : 'ನಿಮ್ಮಲ್ಲಿ ಯಾರಿಗಾದರೂ ನಾವು ಶೋಷಿತರಲ್ಲ. ನಮಗೆ ಸಾಕಷ್ಟು ಸ್ವಾತಂತ್ರ್ಯವಿದೆ' ಎನ್ನಿಸಿದರೆ ಅಂತವರು ಕೈಯೆತ್ತಿ' ಎಂದು. ಒಬ್ಬ ಮಹಿಳೆಯೂ ಕೈಯೆತ್ತಲಿಲ್ಲ. ಆದರೂ ಆ ಮಹಾಶಯ ಬಿಡಲಿಲ್ಲ. 'ಕೈ ಎತ್ತಲು ಅವರಿಗೆ ಸಂಕೋಚ' ಎಂದರು. ಅದಕ್ಕೆ ನಾನು 'ಶೋಷಿತಳಾದ ಹೆಣ್ಣಿಗೆ ಹಾಗೆ ತನ್ನ ಮನೆಯ ಗಂಡಸರ ಮುಂದೆ ಹೇಳಲು ಸಂಕೋಚವಾಗಬಹುದು. ಸ್ವತಂತ್ರ ಮನೋಭಾವದ, ಶೋಷಿತೆಯಲ್ಲದ ಹೆಣ್ಣಿಗೇಕೆ ಸಂಕೋಚವಾಗಬೇಕು?' ಎಂದು ಪ್ರಶ್ನಿಸಿದಾಗ ಸುಮ್ಮನಾದರು.

ನನ್ನದು ಒಂದು ಸಣ್ಣ ಪ್ರಯತ್ನ. ಆದರೆ ಮಹಿಳೆಯರಲ್ಲಿ ಜಾಗೃತಿ ಮೂಡಿಸುವುದರಲ್ಲಿ, ಶೋಷಕರಲ್ಲಿ ಎಚ್ಚರ ಮೂಡಿಸುವಲ್ಲಿ ಅದರಿಂದ ಒಂದು ಕಿಂಚಿತ್ತಾದರೂ ಸಾಧ್ಯವಾದರೆ ನನ್ನ ಶ್ರಮ ಸಾರ್ಥಕವೆಂದುಕೊಳ್ಳುತ್ತೇನೆ.

●

> ಅನುಭವ, ಅನುಭಾವ ಹಾಗೂ ಚಳುವಳಿಯ ಹಿನ್ನೆಲೆಯುಳ್ಳವ ಮಾತ್ರ ಶ್ರೇಷ್ಠ ನಾಟಕಕಾರನಾಗಬಲ್ಲ.
>
> -ಸಿ. ಜಿ. ಕೆ.

# " ಬದಲಾಗಲಿ ಬದುಕು "




ಬೆವರಿನಿಂದ ಬೆನ್ನು ಒದ್ದೆಯಾಗಿತ್ತು. ಪಾದಗಳು ಸುಡುತ್ತಿದ್ದವು. ಎಲ್ಲೆಲ್ಲೂ ಮೌನ. ಒಂದೇ ಕ್ಷಣ ಯಾವುದೋ ಒಂದು ಮೂಲೆಯಿಂದ ಒಂದು ಚಪ್ಪಾಳೆ ಕೇಳಿಸಿತು. ಅನಂತರ ಕಿವಿ ಗಡಚಿಕ್ಕುವ ಕರತಾಡನ ಕೋಣೆ ತುಂಬಿತು. ನಾವು ಹೇಳಬೇಕಿದ್ದುದನ್ನು ಹೇಳಿದ್ದೆವು. ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಮ್ಯೂನಾಲಜಿಯ ಹಾಸ್ಟೆಲಿನಲ್ಲಿ ನಾಟಕ ಪ್ರದರ್ಶನವಾದ ಮೇಲೆ ದುಡಿಯುವ ಸ್ಥಳಗಳಲ್ಲಿ ಮಹಿಳೆ ಅನುಭವಿಸುವ ಲೈಂಗಿಕ ಕಿರುಕುಳದ ಬಗ್ಗೆ ನಡೆದ ಚರ್ಚೆ ಹುರುಪಿನಿಂದ ಕೂಡಿತ್ತು. 40 ಜನ ವಿಜ್ಞಾನಿಗಳೂ ಇದರಲ್ಲಿ ಭಾಗವಹಿಸಿದ್ದರು.

ಮೌನ ಮುರಿಯಲು ಮಹಿಳೆಯರಿಗೆ ಸ್ವಲ್ಪ ಕಾಲಾವಕಾಶ ಬೇಕು. ಹೊತ್ತು ಮೀರುವದಕ್ಕೆ ಮುಂಚೆ ಮನ ಬಿಚ್ಚಿ ಮಾತನಾಡತೊಡಗಿದರು. ಯಾಕೆ ಇದೆಲ್ಲವನ್ನು ಕೆದಕಬೇಕು? ಯಾರು ನನ್ನನ್ನು ನಂಬುವರು? ದೂರು ನಿವಾರಣಾ ಸಮಿತಿ ಪರಿಣಾಮಕಾರಿಯಾಗಿದೆಯೇ? ಅನುಕೂಲವಾಗುವಂತಹ ಯಾವ ರೀತಿಯ ಸಲಹೆ ಸಹಕಾರ ನಿಮ್ಮ ಸಂಘ ನೀಡುವುದು? ಇದರ ಜೊತೆಗೆ ಪುರುಷರು ಕೇಳುವ ಪ್ರಶ್ನೆಗಳಿಂದ ಯಾವತ್ತು ಚರ್ಚೆಯು ಬಿಸಿ ಏರುತ್ತದೆ. ಅವು ಯಾವುವೆಂದರೆ, ಮಹಿಳೆಯರು ಪ್ರತಿಭಟಿಸದಿದ್ದರೆ, ನಾವು ಮಿತಿ ಮೀರಿ ನಡೆದಿದ್ದೇವೆ ಎಂದು ಹೇಗೆ ತಿಳಿಯುವುದು? ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿರುವ ಮಹಿಳೆಯು ಲೈಂಗಿಕ ಕಿರುಕುಳಕ್ಕೆ ಒಳಗಾದಾಗ, ಆಕೆ ಅದನ್ನು ಪ್ರತಿಭಟಿಸದಿದ್ದಲ್ಲಿ, ನಾವು ಸಹಾಯ ಮಾಡುವುದಾದರೂ ಹೇಗೆ? ಯಾಕೆಂದರೆ ಆಕೆ ಅದನ್ನು ಸುಖಿಸುತ್ತಿರಬಹುದು. ಅದು ಬಿಡಿ, ತಾಯಿ ಮಗನನ್ನು ಸರಿಯಾಗಿ ಬೆಳೆಸಿಲ್ಲ, ಸಮಾಜದ ರಚನೆ ಇದಕ್ಕೆ ಕಾರಣ ಎಂದು ಬುದ್ಧಿಜೀವಿಗಳು ಸುಲಭವಾಗಿ ತೀರ್ಮಾನಿಸುತ್ತಿರುವುದು ತಿಳಿದ ವಿಷಯವೇ. ಅದರ ತದ್ವಿರುದ್ಧವಾಗಿ ಸಮಾಜ ಎಂದರೆ ಯಾರು? ನಾವು, ನೀವು ಎಂದಾಗ ಎಲ್ಲರೂ ಮೌನ.... ಇದೇ ನಮ್ಮ ನಾಟಕದ ವಿಷಯ.

ದುಡಿಯುವ ಸ್ಥಳಗಳಲ್ಲಿ ಮಹಿಳೆಯರು ಅನುಭವಿಸುವ 'ಲೈಂಗಿಕ ಕಿರುಕುಳ' ಕುರಿತು ಅರಿವು ಉಂಟುಮಾಡಿ, ಅದು ನಮ್ಮೆಲ್ಲರ ನಿತ್ಯ ಜೀವನದಲ್ಲಿ ನಡೆಯುತ್ತದೆ. ಬೇರೆ ಕಡೆ ಅಲ್ಲೆಲ್ಲೋ ಇರುವುದಿಲ್ಲ ಎಂದು ಮನವರಿಕೆ ಉಂಟುಮಾಡುವ ಉದ್ದೇಶ ಹೊಂದಿತ್ತು. ಮಾಮೂಲಿನಂತೆ ಬೀದಿ ನಾಟಕದ ರೂಪವನ್ನು ಬಳಸಲಿಲ್ಲ. ಅದರ ಬದಲು ಈ ಸಂದೇಶವನ್ನು ಪರಿಣಾಮಕಾರಿಯಾಗಿ ನೀಡಲು ನಾಟಕದ ನೂತನ ರೂಪಾಂತರವನ್ನು ಬಳಸುವ ತಯಾರಿ ನಡೆಸಿದೆವು.

1997-98ನೇ ಸಾಲಿನಲ್ಲಿ ದುಡಿಯುವ ಸ್ಥಳದಲ್ಲಿ ಮಹಿಳೆಯರ ಮೇಲೆ ನಡೆಯುವ 'ಲೈಂಗಿಕ ಕಿರುಕುಳ'ದ ವಿಷಯದಲ್ಲಿ ಒಂದು ಸಮೀಕ್ಷೆ ನಡೆಸಿದೆವು. ಅದು ತಲುಪಿರುವ ಮಟ್ಟವನ್ನು ಗಮನಕ್ಕೆ ತೆಗೆದುಕೊಂಡೆವು. ಈ ವಿಷಯವನ್ನು ನಮ್ಮ ನಮ್ಮಲ್ಲೆ ಸೆಮಿನಾರ್ ಮಾಡಿ ಚರ್ಚಿಸುವ ಬದಲು ದುಡಿಯುವ ಮಹಿಳೆಯು ವಿಷಯವನ್ನು ಯಾವ ರೀತಿ ಯೋಚಿಸುತ್ತಾಳೆ ಎಂದು ತಿಳಿದುಕೊಳ್ಳುವ ಭಾವನೆ ಮೂಡಿತು.

ನಾವು ಆಡುವ ನಾಟಕ ಚರ್ಚೆಗೆ ಆಸ್ಪದ ಕೊಡುವಂತಹುದ್ದಾಗಿರಬೇಕು. ಪರಸ್ಪರ ಸಂವಾದ ಏರ್ಪಡಿಸಿ ಆಶು ಸಂಭಾಷಣೆ ರೂಪವನ್ನು ಅಳವಡಿಸಿಕೊಳ್ಳಬೇಕು ಎಂದು ಕೊಂಡಿದ್ದೆವು. ದುರಾದೃಷ್ಟದಿಂದ ನಮ್ಮ ಈ ಪ್ರಯತ್ನ ಸಫಲಗೊಳ್ಳಲಿಲ್ಲ. ನಾವು ಆಡುವ ಈ ನಾಟಕ ಕೇವಲ ಮನರಂಜನೆಯಾಗಿ ಉಳಿಯದೆ ಜನಸಮೂಹವನ್ನು ತಲುಪುವ ಮಾರ್ಗವಾಗಬೇಕಿತ್ತು. ಅದಕ್ಕಾಗಿ ನಾಟಕ ತಯಾರಿ ಸುರು ಮಾಡಿದೆವು.

ನಾಟಕದ ಏಳು ಬೀಳುಗಳು :

ನಾಟಕ ದ ಉಗಮ ನಮಗೆ ಅದ್ಭುತ ಅನುಭವ ನೀಡಿತು. ನಮ್ಮಲ್ಲಿ ಯಾರಿಗೂ ನಾಟಕ ಆಡುವುದರಲ್ಲಿ ಅನುಭವ ಸ್ವಲ್ಪವೂ ಇರಲಿಲ್ಲ. ನಮ್ಮಲ್ಲಿ ಹಲವರಿಗೆ ರಂಗದ ಮೇಲೆ ಹೋಗಬೇಕೆಂಬ ಆಲೋಚನೆಯೇ ನಡುಕ ಹುಟ್ಟಿಸುತ್ತಿತ್ತು. ನಾಟಕ ಆಡಲು ಹುಮ್ಮಸ್ಸು ಇರುವ 'ಸಹೇಲಿ'ಯ ಅನೇಕ

ಸ್ನೇಹಿತರನ್ನು ಒಟ್ಟುಗೂಡಿಸಿದೆವು. ಇದಕ್ಕೆ ' ಸಹೇಲಿ'ಯ ಸದಸ್ಯತ್ವ ಕಡ್ಡಾಯವಾಗಿರಲಿಲ್ಲ. ಮೊಟ್ಟಮೊದಲಿಗೆ ನಾಟಕವನ್ನು ಪ್ರಾರಂಭಿಸುವ ಬಗೆಯೇ ಒಂದು ಪ್ರಯಾಸಕರ ಸಂಗತಿಯಾಗಿತ್ತು. ಮೊದಲಿಗೇ ಸ್ಕ್ರಿಪ್ಟ್ (ಹಸ್ತಪ್ರತಿ) ರಚಿಸಿ ನಂತರ ನಾಟಕದ ತಯಾರಿ ಮಾಡುವುದರಿಂದ ನಾಟಕವು ಹುಟ್ಟುವ ಮೊದಲೆ ಅಂತ್ಯ ಕಾಣುವುದೆಂದು ನಮಗೆ ಮನವರಿಕೆಯಾಗಿತ್ತು.

ಒಂದು ಕಡೆ ಗಡದ್ದಾಗಿ ಕುಳಿತು ಚರ್ಚೆ ಮಾಡುವುದರಲ್ಲಿ ನಿಸ್ಸೀಮರಾಗಿರುವ ನಾವು ಈ ಚರ್ಚೆಗೆ ಕೊನೆಯಿರುವುದಿಲ್ಲ ಅಂತ ನಿರ್ಧರಿಸಿದೆವು. ನಾಟಕ ತರಬೇತಿ ಶಿಬಿರದಿಂದ ನಾಟಕದ ಪ್ರಕ್ರಿಯೆ ಪ್ರಾರಂಭಿಸಿದೆವು. ವ್ಯಾಯಾಮದಿಂದ ಅಂಗಾಂಗಗಳನ್ನು ಸಡಿಲಗೊಳಿಸುವುದು, ಧ್ವನಿಯನ್ನು ವಿವಿಧ ರೀತಿಯಲ್ಲಿ ಬಳಸುವ ತರಬೇತಿ, ಗುಂಪಿನಲ್ಲಿ ಲಯಬದ್ಧವಾಗಿ ಚಲಿಸುವ ರೀತಿ ನೀತಿ, ಆರಾಮವಾಗಿ ಚಲಿಸುವ ತರಬೇತಿ ಇತ್ಯಾದಿಗಳನ್ನು ಕಲಿತೆವು, ನಮ್ಮಲ್ಲಿ ಕೆಲವರು ಇದು ಕೇವಲ ಸಮಯ ವ್ಯರ್ಥ ಎಂದು ಗೊಣಗಾಡಿದರು. ಆದರೂ ಈ ತರಬೇತಿಯ ಉಪಯುಕ್ತತೆಯನ್ನು ಹಲವಾರು ಬಾರಿ ಮನಗಂಡೆವು. ಜಡಗಟ್ಟಿದ ನಮ್ಮ ದೇಹಗಳಿಗೆ ಚೈತನ್ಯ ತುಂಬಿತು. ಸಣ್ಣ ಪುಟ್ಟ ಬಸ್ತಿಗಳಲ್ಲಿ, ತರಗತಿಗಳಲ್ಲಿ, ಕಿರಿದಾದ ರಂಗದ ಮೇಲೆ ಅತಿ ಸುಲಭವಾಗಿ ನಮ್ಮ ಇಡೀ ತಂಡವನ್ನು ಅಳವಡಿಸಿಕೊಂಡು ನಾಟಕ ಪ್ರದರ್ಶನ ನೀಡುವ ಸಾಧ್ಯತೆ ಕಂಡುಕೊಂಡು, ಸುಮಾರು ಪ್ರದರ್ಶನ ನೀಡುವ ವೇಳೆಗೆ ಇವೆಲ್ಲವೂ ಸ್ವಾಭಾವಿಕವಾಗಿ ಹೋಗಿದ್ದವು.

ನಾಟಕದಲ್ಲಿ ನಾವು ಏನು ಹೇಳಬೇಕು ಎಂದು ಸರಿಯಾಗಿ ತಿಳಿದಿದ್ದರೂ ಯಾವ ರೀತಿ ಹೇಳಬೇಕು ಎಂದು ತಿಳಿದಿರಲಿಲ್ಲ. ನಾಟಕದಲ್ಲಿ ಏನನ್ನು ಪ್ರದರ್ಶಿಸಬಾರದು ಎಂದು ಹೆಚ್ಚು ತಿಳಿದಿತ್ತು. ಉದಾ: ನೊಂದ ಮಹಿಳೆಯ ಕಣ್ಣೀರಿನ ಕಥೆಯಲ್ಲಿ ಬರುವ ಬಲಿಪಶು ಹೆಣ್ಣಿನ ಚಿತ್ರಣವನ್ನು, ನಿರಾಶಾದಾಯಕ, ಸಂಕಟಕರ ಪರಿಸ್ಥಿತಿಯ ಚಿತ್ರಣವನ್ನು ತೋರಿಸಲು ಸುತಾರಾಂ ಇಷ್ಟವಿರಲಿಲ್ಲ. ಸಮಸ್ಯೆಗೆ ದಿಢೀರ್ ಪರಿಹಾರ ಸೂಚಿಸುವ ಉದ್ದೇಶವೂ ಇರಲಿಲ್ಲ. ಪರಿಸ್ಥಿತಿಯ ಸಂಕೀರ್ಣತೆಯನ್ನು, ಸೂಕ್ಷ್ಮವನ್ನು ಅದರ ವ್ಯತ್ಯಾಸವನ್ನು ತಕ್ಕಮಟ್ಟಿಗೆ ಪ್ರತಿಬಿಂಬಿಸುವ ಉದ್ದೇಶ ಹೊಂದಿದ್ದೆವು. ವ್ಯಕ್ತಿತ್ವವಿಲ್ಲದ, ಗಂಡುಬೀರಿಯಂತಹ ಹೆಣ್ಣಿನ ಚಿತ್ರಣವನ್ನು ತೋರಲು ಇಷ್ಟವಿರಲಿಲ್ಲ. ಹಿಂಸೆಯ ವಿವಿಧ ರೂಪ, ಅವಮಾನ, ಮತ್ತು ಭೀತಿ ಇತ್ಯಾದಿಗಳನ್ನು ಪ್ರದರ್ಶಿಸುವ ಇಚ್ಛೆ ಇರಲಿಲ್ಲ.

ಮನೆ ಕೆಲಸ ಮಾಡುವ ಹುಡುಗಿಯೊಬ್ಬಳು ಆ ಮನೆಯ ಯಜಮಾನ ನೀಡುವ ಕಿರುಕುಳದ ದೃಶ್ಯ ಸಂಯೋಜಿಸಿದೆವು. ಮೌನ ತುಂಬಿದ ವಾತಾವರಣ, ಸಂಕಟದಿಂದ ನರಳುತ್ತಿರುವ ಹುಡುಗಿಗೆ ಗಂಟಲುಬ್ಬಿ ಬರುತ್ತಿದೆ. ಅಸಹಾಯಕ ಪರಿಸ್ಥಿತಿಯಿಂದ ಭೀತಿಗೊಳಗಾಗಿದ್ದಾಳೆ. ಒಂಟಿಯಾಗಿರುವ ಹುಡುಗಿಗೆ, ಆತ ತನ್ನನ್ನು ಹಿಂಬಾಲಿಸುತ್ತಿದ್ದಾನೆ, ತನ್ನ ಕಡೆ ಲೈಂಗಿಕಾಸಕ್ತಿ ತೋರುತ್ತಿದ್ದಾನೆ ಎಂದು ತಿಳಿದು ಹೆದರಿದ್ದಾಳೆ. ಈ ದೃಶ್ಯವನ್ನು ನೋಡಿದ ಸಹೇಲಿಯ ಗೆಳತಿಯೊಬ್ಬಳು ಮೈ ನವಿರೇಳಿಸುವಂತಿತ್ತು ಎಂದಳು. ಈ ದೃಶ್ಯಗಳಲ್ಲಿ ಯಜಮಾನನ ಚಿತ್ರಣ ಇರಲಿಲ್ಲ. ಆದರೆ ಆ ಕೇಡಿಗನ ಇರುವಿಕೆ ವ್ಯಕ್ತ ವಾಗುತ್ತಿತ್ತು. ಈ ದೃಶ್ಯ ಸಂಯೋಜಿಸಿದ ನಂತರ ನಾವು ಹಿಂತಿರುಗಿ ನೋಡಲೇ ಇಲ್ಲ. ಒಂದಾದ ಮೇಲೆ ಒಂದಂತೆ ಅನೇಕ ದೃಶ್ಯಗಳನ್ನು ಜೋಡಿಸಿದೆವು. ಹಲವೊಮ್ಮೆ ಶಾಲಾ ಕಾಲೇಜುಗಳಲ್ಲಿ ನಾಟಕವಾಡುವ ಪ್ರಸಂಗ ಬಂದಲ್ಲಿ ಕಾಲೇಜು ಹುಡುಗಿಯ ಪಾತ್ರವನ್ನು ಜೋಡಿಸಿಕೊಳ್ಳುವಂತೆ ಅನುವು ಮಾಡಿಕೊಂಡಿದ್ದೆವು.

ಲೈಂಗಿಕ ಕಿರುಕುಳಕ್ಕೆ ತುತ್ತಾದ ಹೆಣ್ಣು ಅಪಮಾನ, ಸಂಕಟ, ಅಸಹಾಯಕತೆ ಅನುಭವಿಸುತ್ತಿರುವ ಜೊತೆಗೆ ಅವಳೇ ತಪ್ಪಿತಸ್ಥಳು ಎಂದು ಸುಲಭವಾಗಿ ದೂರುವ ಈ ಸಮಾಜದ ಕೃತ್ರಿಮತೆಯನ್ನು ಹೇಗಾದರೂ ಈ ನಾಟಕದಲ್ಲಿ ಪ್ರತಿಬಿಂಬಿಸಬೇಕಿತ್ತು. ಸಾಕಷ್ಟು ಚರ್ಚೆಗಳು ನಡೆದು ಈ ಸಂದರ್ಭದ ಅಸಂಬದ್ಧತೆಯನ್ನು ಉಪಯೋಗಿಸಿಕೊಂಡು ದೃಶ್ಯವನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಬಹುದು ಎಂದು ಯೋಚಿಸಿದೆವು.

ಪುರುಷನೊಬ್ಬನು ತನ್ನ ಜೇಬಿನಲ್ಲಿ ಹಣದ ಪರ್ಸ್‌ನ್ನು ಇಟ್ಟುಕೊಂಡು ಹೋಗುತ್ತಿದ್ದಾಗ ಅವನ ಪರ್ಸ್ ಅಪಹರಣವಾಗುತ್ತದೆ. ಆಗ ರಸ್ತೆಯಲ್ಲಿದ್ದ ಎಲ್ಲರೂ ಅವನೊಂದಿಗೆ ಸಹಾನುಭೂತಿ ತೋರದೆ ಹತ್ತಾರು ಪ್ರಶ್ನೆಗಳನ್ನು ಹಾಕುತ್ತಾರೆ. ನೀನು ಯಾಕೆ ಮನೆ ಬಿಟ್ಟು ಬೀದಿಗೆ ಬಂದೆ? ನಿನ್ನ ಯಾರು ಪರ್ಸ್‌ನ ಜೇಬಿನಲ್ಲಿಟ್ಟುಕೊ ಎಂದು ಹೇಳಿದ್ದು? ಶರಾಯಿಯಲ್ಲಿ ಜೇಬು ಹೊಲಿಸಿದ್ದು ಯಾಕೆ? ಒಟ್ಟಾರೆ ಆತನ ಪರ್ಸ್ ಕಳುವಾಗಿದ್ದಕ್ಕೆ ಅವನೇ ಕಾರಣ ಎಂದು ಸಂದರ್ಭದ ಅಣಕವನ್ನು ಪ್ರದರ್ಶಿಸಿದೆವು. ಇದರಿಂದ ಬಲಿಪಶುವಾದವರೆ ತಪ್ಪಿತಸ್ಥರು ಎಂದು ಸಂದೇಶ ಬರುವಂತೆ ದೃಶ್ಯ ನಿಯೋಜಿಸಿದೆವು. ಈ ದೃಶ್ಯ ವಿಪರೀತ ಜನಮನ್ನಣೆ ಪಡೆಯಿತು. ಪುರುಷನ ಪಾತ್ರವನ್ನು ನಮ್ಮಲ್ಲೆ ಒಬ್ಬರು ಮಾಡುತ್ತಿದ್ದೆವು.

ಲೈಂಗಿಕ ಕಿರುಕುಳದ ವಿಷಯದಲ್ಲಿ ಸರ್ವೋಚ್ಚ ನ್ಯಾಯಾಲಯ ನೀಡಿದ ಆದೇಶವನ್ನು ನಾಟಕದಲ್ಲಿ ಪ್ರದರ್ಶಿಸುವ ಬಗೆ ನಮಗೆ ಸವಾಲಾಗಿತ್ತು. ಆದೇಶದ ಮಹತ್ವ ಮತ್ತು ಉಪಯುಕ್ತತೆಯನ್ನು ಪ್ರೇಕ್ಷಕರಿಗೆ ಚಿಟ್ಟು ಹಿಡಿಸದೆ

ನಾವು ಹೇಳಬೇಕಾಗಿತ್ತು. ಇದನ್ನು ತಿಳಿಹಾಸ್ಯದ ಮೂಲಕ ತಿಳಿಸಿದರೆ ಪರಿಣಾಮಕಾರಿಯಾಗಿ ಬರಬಹುದು ಎಂದು ಯೋಚಿಸಿದೆವು.

ಉದ್ಯೋಗಸ್ಥ ಮಹಿಳೆಯರಿಗೆ ಅವರ ಕೆಲಸದ ಸ್ಥಳಗಳಲ್ಲಿ ಅನುಭವಿಸುವ ಲೈಂಗಿಕ ಕಿರುಕುಳಕ್ಕೆ ಸರಿಯಾದ ಅರ್ಥ ಸೂಚಿಸುವಂತಹ ಪದಗಳ ಹುಡುಕಾಟ ನಮಗೆ ಮತ್ತೊಂದು ಸವಾಲಾಗಿತ್ತು. 'ಅತ್ಯಾಚಾರ' ಎಂಬ ಪದವು ಹಿಂಸಾಚಾರದ ಘೋರ ರೂಪವಾದ ಲೈಂಗಿಕ ಅತ್ಯಾಚಾರದ ಅರ್ಥ ಕೊಡುವುದರಿಂದ ಅದನ್ನು ಬಳಸಲು ಹಿಂಜರಿದೆವು. ರೇಗಿಸುವುದು, ಕೀಟಲೆ, ಲೇವಡಿ ಎಂಬ ಪದಗಳು ಹೆಚ್ಚು ಸೂಕ್ತ ಎಂದೆನಿಸಿ ಅವುಗಳ ಬಳಕೆ ಮಾಡಿದೆವು. ಮನಸೋ ಇಚ್ಚೆ ಕೆಲಸ ಮಾಡುವ ನಮ್ಮಂತಹ ಗುಂಪಿಗೆ ಈ ನಾಟಕವು ಒಂದು ರೂಪಕ್ಕೆ ಬರಲು 4 ತಿಂಗಳು ಹಿಡಿಸಿದ್ದು ಅತಿಶಯವೇನು ಅಲ್ಲ. ಹಲವರು ಪೂರ್ಣ ಕಾಲದ ಉದ್ಯೋಗದೊಂದಿಗೆ ಸಹೇಲಿಯ ಇತರ ಚಟುವಟಿಕೆಗಳೊಂದಿಗೆ ಭಾಗಿಯಾಗಿರುತ್ತಿದ್ದರೂ ಈ ನಾಟಕದ ತಯಾರಿಗೆ ಮೊದಲ ಆದ್ಯತೆ ನೀಡಿದೆವು. ಮುಟ್ಟಿನ ಸಮಯದ ಸ್ನಾಯುಗಳ ಎಳೆತ, ಬೆನ್ನು ನೋವು, ಉಳುಕಿದ ಕಾಲುಗಳು, ಮಂಡಿನೋವು, ಬಳಲಿಕೆಗಳಿಂದ ನಾವು ಹೊರ ಬರಬೇಕಾಗಿತ್ತು. ಇದ್ದಕ್ಕಿದ್ದಂತೆ ಚಿಮ್ಮುವ ಉತ್ಸಾಹ, ನವ ಚೈತನ್ಯ ಮತ್ತೆ ಕೆಲವು ದಿನಗಳ ಉದಾಸೀನ. ಹೀಗೆ ನಾಟಕವು ಒಂದು ರೂಪಕ್ಕೆ ಬರಲು ತನ್ನದೇ ಕಾಲಾವಕಾಶ ಪಡೆಯಿತು. ನಮ್ಮೆಲ್ಲರ ಪ್ರಯತ್ನ ಶ್ರಮಕ್ಕೆ ಪ್ರತಿಫಲ ದೊರತಿತು. ಸುಪ್ತವಾಗಿದ್ದ ಪ್ರತಿಭೆ ಬೆಳಕಿಗೆ ಬಂದವು. ಸಂಭಾಷಣೆ ಬರೆಯುವ, ಸಾಹಿತ್ಯ ರಚಿಸುವ, ಸಂಗೀತ ಸಂಯೋಜಿಸುವ, ನೃತ್ಯ ಸಂಯೋಜಿಸುವ, ಕಥೆಯನ್ನು ಬರೆಯುವ ಹೀಗೆ ಹಲವಾರು ಕಲಾ ಕರ್ಮಿಗಳು ಕೆಲಸದಲ್ಲಿ ಮುಂದಾದರು. ಸಹೇಲಿಯ ಸದಸ್ಯೆಯ ಹತ್ತು ವರ್ಷದ ಪುಟ್ಟ ಮಗಳೂ ಸಂಭಾಷಣೆಗಳನ್ನು ಸೇರಿಸಿದಳು. 20 ನಿಮಿಷಗಳ ಅವಧಿಯಿಂದ ಕೂಡಿದ ಈ ನಾಟಕವು ರೋಮಾಂಚಕರ ಸಂಗೀತ, ಲಯಬದ್ಧ ಚಲನೆ ಬಣ್ಣದ ಉಡುಗೆಗಳಿಂದ (ಬೀದಿ ನಾಟಕದ ಯೂನಿಫಾರಂ ಆದ ಖಾದಿ ಕುರ್ತಾ ತೊಟ್ಟು ತೊಟ್ಟು ಬೇಸತ್ತಿದ್ದೇವು.) ಕೂಡಿತ್ತು. ನಮ್ಮ ಸ್ನೇಹಿತರೊಬ್ಬರು ಮ್ಯಾಂಡಲೀನ್ ನುಡಿಸಿದ್ದು ಈ ನಾಟಕಕ್ಕೆ ವಿಶೇಷ ಮೆರಗು ನೀಡಿತ್ತು.

**ಸಾರ್ವಜನಿಕರ ಎದುರು**

ನಾವು ನೀಡಿದ ಮೊದಲ ನಾಟಕ ಪ್ರದರ್ಶನ ಬಹಳ ಪ್ರಯಾಸಕರವಾಗಿತ್ತು. ಪೀಪಲ್ಸ್ ಯೂನಿಯನ್ ಫಾರ್ ಡೆಮೊಕ್ರಾಟಿಕ್ ರೈಟ್ಸ್‌ನವರು. ''ಸಾಹಿತ್ಯ ಮತ್ತು ಪ್ರಜಾಪ್ರಭುತ್ವದ ಹಕ್ಕುಗಳು'' ವಿಷಯದ ಕುರಿತು ಒಂದು ಸಭೆ ಏರ್ಪಡಿಸಿದ್ದರು. ರಂಗದ ಮೇಲೆ ''ಅಸಮ್ಮತಿಸುವ ಧ್ವನಿಗಳು'' ಎಂಬ ಬ್ಯಾನರು ಇತ್ತು. ಮೈ ಕೈಕಾಲುಗಳಲ್ಲಿ ನಡುಕ ಉಂಟಾಗುತ್ತಿತ್ತು. ಸುಮಾರು 200 ಜನ ಕಾರ್ಯಕರ್ತರು ಇದ್ದರು. ಅಬ್ಬಾ ಎಂತಹ ಅದ್ಭುತ ಮೆಚ್ಚುಗೆ! ಕರತಾಡನ ಕೋಣೆ ತುಂಬಿತ್ತು. ನಾಟಕದ ಕೊನೆಯ ಹಾಡನ್ನು ಹಾಡುವಾಗ ಎಲ್ಲರೂ ಲಯಬದ್ಧವಾಗಿ ಚಪ್ಪಾಳೆ ತಟ್ಟಿ ಮೆಚ್ಚುಗೆ ಸೂಚಿಸಿದ್ದು ನಾವು ಮರೆತಿಲ್ಲ.

ಹತ್ತು ಹಲವು ಸಲಹೆ, ಸೂಚನೆಗಳು ಬಂದವು. ಕೆಲವನ್ನು ಮುಂದಿನ ನಾಟಕ ಪ್ರದರ್ಶನದಲ್ಲಿ ಅಳವಡಿಸಿಕೊಂಡಾಗ ನಾಟಕ ಪ್ರದರ್ಶನ ಮತ್ತಷ್ಟು ಹಿಡಿತದಿಂದ ಕೂಡಿತ್ತು. ಸಂಭಾಷಣೆಗಳನ್ನು ಚುರುಕುಗೊಳಿಸಿದ್ದೆವು. ಹೆಣ್ಣೊಬ್ಬಳು ಮನ ಬಿಚ್ಚಿ ಮಾತನಾಡತೊಡಗಿ ದೂರು ನೀಡುವ ಹಂತಕ್ಕೆ ಹೋಗುವ ಮುಂಚೆ ತೀರ ಇಕ್ಕಟ್ಟಿನ, ಸಂಕಟದ, ಅಳುಕಿನ ಪರಿಸ್ಥಿತಿ ಎದುರಿಸಬೇಕಾಗುತ್ತದೆ ಎಂಬ ಅಂಶವನ್ನು ನಾವು ನಾಟಕದಲ್ಲಿ ಅಳವಡಿಸಿಕೊಂಡೆವು. ಹಲವು ನಾಟಕ ಪ್ರದರ್ಶನಗಳಾದ ಮೇಲೆ ಕುಳಿತು ಸಂಭಾಷಣೆ ಬರೆದೆವು. ಪ್ರತಿ ನಾಟಕ ಪ್ರದರ್ಶನವು ಅದರದೇ ಆದ ವೈಶಿಷ್ಟ್ಯತೆಯಿಂದ ಕೂಡಿತ್ತು.

**ಪಂಡಿತರ ಗುಂಪಿನಲ್ಲಿ.........**

ನಾಟಕ ಪ್ರದರ್ಶನವನ್ನು ಬಹುಪಾಲು ಶಾಲಾ ಕಾಲೇಜು, ಯುನಿವರ್ಸಿಟಿಯ ವಿದ್ಯಾರ್ಥಿಗಳ ಸಮ್ಮುಖದಲ್ಲಿ ನೀಡಿದ್ದೆವು. ನಮ್ಮಲ್ಲಿ ಹಲವರು ಕಾಲೇಜು ಪ್ರಾಧ್ಯಾಪಕರುಗಳಾಗಿರುವುದರಿಂದ ಇದು ಸಹಜವಾಗಿ ನಡೆದು ಹೋಯಿತು. ದೆಹಲಿ ವಿಶ್ವವಿದ್ಯಾಲಯದ ''ಜಂಡರ್ ಜಸ್ಟೀಸ್ ಗ್ರೂಪ್'', ''ಫೋರಮ್ ಎಗೈನೆಸ್ಟ್ ಸೆಕ್ಷುಯಲ್ ಹರಾಸ್‌ಮೆಂಟ್'' ಮತ್ತು ಜೆಎನ್‌ಯುದ ''ಜೆಂಡರ್ ಸೇನ್ಸಿಟೈಸೆಷನ್ ಕಮಿಟಿ ಎಗೈನೆಸ್ಟ್ ಸೆಕ್ಷುಯಲ್ ಹರಾಸ್‌ಮೆಂಟ್'' ಸಂಘಗಳಲ್ಲಿ ಕೆಲಸ ಮಾಡುತ್ತಿದ್ದ ಹಲವರ ಪರಿಚಯ ಇತ್ತು. ಈ ಎಲ್ಲ ಸ್ಥಳಗಳಲ್ಲಿ ನಾಟಕ ಪ್ರದರ್ಶನದ ತರುವಾಯ ಚರ್ಚೆ ನಡೆಸಲು ಅನುಕೂಲಕರ ಅವಕಾಶ ಸಿಕ್ಕಿತು. ಈ ಚರ್ಚೆಗಳಲ್ಲಿ ನಾವು ಅನೇಕ ರೀತಿಯ ಪ್ರಶ್ನೆಗಳನ್ನು ಎದುರಿಸಬೇಕಾಯಿತು. ಅಂತಹ ಕೆಲವು ಪ್ರಶ್ನೆಗಳು :

* ಮನೆಗಳಲ್ಲಿ, ಬೀದಿಗಳಲ್ಲಿ, ಬಸ್‌ಗಳಲ್ಲಿ, ಮಹಿಳೆಯರು ಶೋಷಿಸಲ್ಪಡುತ್ತಿರುವಾಗ, ಕೆಲಸ ಮಾಡುವ ಸ್ಥಳಗಳಲ್ಲಿ ನಡೆಯುತ್ತಿರುವ ಲೈಂಗಿಕ ಶೋಷಣೆಗೆ ಸಂಬಂಧಪಟ್ಟಂತೆ ಮಾತ್ರ ಯಾಕೆ ಹೆಚ್ಚು ಒತ್ತು ನೀಡುತ್ತಿದ್ದೀರಿ.
* ಮಹಿಳೆ ಸ್ನೇಹದ ಮಿತಿಯನ್ನು ದಾಟಿ ಲಲ್ಲೆ ಹೊಡೆದು ಇಂತಹುದನ್ನು ಆಹ್ವಾನಿಸುತ್ತಾಳೆ.
* ಲೈಂಗಿಕ ಕಿರುಕುಳದ ವಿರುದ್ಧ ಪ್ರತಿಭಟಿಸಿ, ''ಹೆಣ್ಣು ಹುಲಿ''

ಎಂದು ಪಟ್ಟ ಕಟ್ಟಿಸಿಕೊಳ್ಳುವ ಬದಲು ಮೌನವಾಗಿ ಬಾಯಿಮುಚ್ಚಿಕೊಂಡು ಇರುವುದು ಒಳ್ಳೆಯದು.

* ದೂರು ನೀಡಲು ನಾವು ತಯಾರಾಗಿ ಇದ್ದರೂ, ಅದರ ರೀತಿ ನೀತಿಗಳ ವಿವರ ನಮಗೆ ತಿಳಿದಿಲ್ಲ.
* 'ಕಿರುಕುಳ' ಎಂಬ ಪದದ ಅರ್ಥವೇ ತಿಳಿಯದ ಗಂಡಸರಿಗೆ ಮೊದಲು ಆ ವಿಷಯದ ಬಗ್ಗೆ ತಿಳಿ ಹೇಳುವ ಅವಶ್ಯಕತೆ ಇದೆ.
* ಸಹಾನುಭೂತಿಯುಳ್ಳ ಪುರುಷರು ಈ ಸಂದರ್ಭದಲ್ಲಿ ಏನು ಮಾಡಬೇಕು? (ಕೆಲವು ಸಹಾನುಭೂತಿಯುಳ್ಳ ಪುರುಷರು ಹಾಕಿದ ಪ್ರಶ್ನೆ)
* ನಿಮ್ಮಂತಹ ಸಂಘಗಳು ಯಾವ ರೀತಿ ಸಲಹೆ ಸಹಕಾರ ನೀಡಬಲ್ಲದು. ಸ್ಥಳೀಯ ಗುಂಪುಗಳು/ಸಂಘಟನೆಗಳು/ಸಂಸ್ಥೆಗಳು ಈ ವಿಷಯವನ್ನು ಕೈಗೆತ್ತಿಕೊಳ್ಳಬೇಕಾಗಿರುವ ಅವಶ್ಯಕತೆ ಇದೆ ಎಂದು ಇಷ್ಟೆಲ್ಲಾ ಚರ್ಚೆಯಾದ ಮೇಲೆ ಮನವರಿಕೆಯಾಗಿತ್ತು.

**ಸಾರ್ವಜನಿಕರ ಎದುರು ಪ್ರದರ್ಶಿಸಿದಾಗ :**

ಅಂತರ ರಾಷ್ಟ್ರೀಯ ಮಹಿಳಾ ದಿನವಾದ ಮಾರ್ಚ್ 8 ರಂದು 300-400 ಮಹಿಳೆಯರೆದುರು ಪ್ರದರ್ಶನ ನೀಡಿದೆವು. ನಾಟಕದ ವೈಶಿಷ್ಟ್ಯತೆಯನ್ನು ಮೆಚ್ಚಿದರು. ನಮ್ಮ ಭಾವನೆಗಳನ್ನು ಗ್ರಹಿಸುವ ಈ ಮಹಿಳೆಯರ ಮುಂದೆ ಪ್ರದರ್ಶನ ನೀಡಿದ್ದು ನಮಗೆ ಖುಷಿಯಾಯಿತು. ಅವರ ಮೆಚ್ಚುಗೆಯ ನಗುಮುಖ, ಒಪ್ಪಿಗೆಯ ಸಮ್ಮತಿ ಸೂಚಿಸಿ ಆಗಾಗ ತಲೆ ಆಡಿಸುವುದು ವ್ಯಕ್ತವಾಗುತ್ತಿತ್ತು. ರಸ್ತೆಯಲ್ಲಿ ಸಾಗುವ ವಾಹನಗಳ ಶಬ್ದಗಳಿಂದ, ದಾರಿಹೋಕರುಗಳಿಂದ ಮತ್ತು ಇತರ ಅಡಚಣೆಗಳಿಂದ ಕೂಡಿದ್ದರೂ, ನಮ್ಮ ನಾಟಕ ಪ್ರೇಕ್ಷಕರ ಗಮನ ಸೆಳೆದು ಹಿಡಿದಿಟ್ಟಿದ್ದು ತೋರುತ್ತಿತ್ತು.

ಪೂರ್ವಾಂಚಲದ ಕಾರ್ಮಿಕ ಒಕ್ಕೂಟ ಮತ್ತು ದೆಹಲಿ ಚರ್ಮ ವಸ್ತುಗಳ ಕಾಮಗಾರ್ ಸಂಘಟನೆಗಳು ನಡೆಸಿದ ಮೇ ದಿನದ ಸಮಾರಂಭದಲ್ಲಿ ನಾಟಕ ಪ್ರದರ್ಶನ ನೀಡಿದೆವು. ಕಾರ್ಮಿಕ ಸಂಘಟನೆಗಳು, ಕಾರ್ಮಿಕ ದಿನದಂದು ಹಲವಾರು ಕಾರ್ಯಕ್ರಮ ಹಮ್ಮಿಕೊಂಡಿದ್ದು, ಅದರಲ್ಲಿ ನಮ್ಮ ನಾಟಕ ಪ್ರದರ್ಶನಕ್ಕೆ ಕರೆ ಬಂದಿದ್ದು ನಮಗೆ ಬಹು ಮುಖ್ಯ ಎನಿಸಿತ್ತು. ಈ ವಿಷಯಕ್ಕೆ ನೀಡಿದ ಮಹತ್ವ, ನಾಟಕವನ್ನು ಕಾರ್ಮಿಕರು ಮೆಚ್ಚಿದ್ದು, ಮತ್ತು ನಂತರ ನಡೆದ ಚರ್ಚೆ ಎಲ್ಲವೂ ಮನ ಮುಟ್ಟುವಂತಿತ್ತು. ಸುಮಾರು 1000 ಜನ ಕಾರ್ಮಿಕರು ಈ ಪ್ರದರ್ಶನ ನೋಡಿದರು. ನಾಟಕದ ನಂತರ ನಡೆದ ಹಲವಾರು ಭಾಷಣಗಳಲ್ಲಿ ಎಲ್ಲ ಕಾರ್ಮಿಕ ಮುಖಂಡರು, ದುಡಿಯುವ ಸ್ಥಳಗಳಲ್ಲಿ ಮಹಿಳೆಯರು ಅನುಭವಿಸುವ ಲೈಂಗಿಕ ಕಿರುಕುಳ ಸಹಿಸದೇ ಅದರ ವಿರುದ್ಧ ಹೋರಾಡಬೇಕು. ಕೆಲವು ಪುರುಷರು ತಿಳಿದೋ ತಿಳಿಯದೆಯೋ ಕೆಲವೊಂದು ಸಲ ತಪ್ಪು ಮಾಡಿರುತ್ತಾರೆ. ಆ ಕ್ರಿಯೆ ಮಹಿಳೆಯರಿಗೆ ಅಹಿತ ಉಂಟುಮಾಡುತ್ತದೆ ಎಂಬ ಅರಿವು ಅವರಿಗಿರಬೇಕು ಎಂದು ಅಭಿಪ್ರಾಯ ಪಟ್ಟರು.

**ಮಹಿಳಾ ಕಾರ್ಮಿಕರ ನಡುವೆ :**

ಒಂದು ಭಾನುವಾರ ಸುಮಾರು 35 ಜನ ಮನೆ ಕೆಲಸದ ಕಾರ್ಮಿಕರ ಗುಂಪಿಗೆ ನಾಟಕ ಪ್ರದರ್ಶನ ಮಾಡಿದೆವು. ಅದರಲ್ಲಿ ಹೆಚ್ಚು ಮಂದಿ ಒರಿಸ್ಸಾ, ಬಿಹಾರದಿಂದ ವಲಸೆ ಬಂದವರು, ಆದಿವಾಸಿ ಕ್ರೈಸ್ತರೂ ಇದ್ದರು. "ನಿರ್ಮಾನ್ ಮಜದೂರ್ ಪಂಚಾಯತ್ ಸಂಗಮ್"ರವರ "ನಿರ್ಮಲ್ ನಿಕೇತನ" ಸಂಘಟನೆಯ ಸದಸ್ಯರಾಗಿದ್ದರು. ಸಣ್ಣ ಕೋಣೆಯಲ್ಲಿ ಕುಳಿತ ಇವರು ಚುರುಕುಗಣ್ಣಿನ, ಉತ್ಸಾಹ ತುಂಬಿ ತುಳುಕುತ್ತಿರುವ ಯುವತಿಯರಾಗಿದ್ದರು. ರಂಗವಿಲ್ಲದ, ಇಕ್ಕಟ್ಟಾದ, ಕೋಣೆಯಲ್ಲಿ ಒಂದು ಮೂಲೆಯಲ್ಲಿ ನಾವು ನೀಡಿದ ನಾಟಕ ಪ್ರದರ್ಶನವನ್ನು ಉತ್ಸುಕತೆಯಿಂದ ನೋಡಿದರು. ಆ ನಾಟಕದಲ್ಲಿ ಬರುವ ಮನೆ ಕೆಲಸದ ಹುಡುಗಿಯ ಪಾತ್ರ ಅವರಿಗೆ ಅತ್ಯಂತ ಸನಿಹವಾಗಿತ್ತು ಎಂದು ನಂತರ ನಡೆದ ಚರ್ಚೆಯಲ್ಲಿ ಹೇಳಿದರು.

ಸೆರೆಮನೆಯ ಬಂಧಿಗಳಂತೆ, ಸ್ವಾತಂತ್ರ್ಯವಿಲ್ಲದ, ಅರೆಹೊಟ್ಟೆಯ, ರಕ್ಷಣೆ ಇಲ್ಲದ ತಮ್ಮ ಅಸಹನೀಯ ಬದುಕು ನೆನೆದುಕೊಂಡರು. ಸ್ವಂತಿಕೆ ಇಲ್ಲದ, ಪರಕೀಯತೆ ಮತ್ತು ಒಂಟಿತನದಿಂದ ಕೂಡಿದ ತಮ್ಮ ಬಾಳಿನ ಗೋಳನ್ನು ಹೇಳಿಕೊಂಡರು. ತಾವು ಅನುಭವಿಸಿದ ನಮ್ಮ ಗಮನಕ್ಕೆ ಬರದ ಕಿರುಕುಳದ ಅನೇಕ ಸೂಕ್ಷ್ಮ ರೀತಿಗಳನ್ನು ನಮಗೆ ತಿಳಿಸಿ ಚಕಿತಗೊಳಿಸಿದರು. ಉದಾ: ಒಬ್ಬ ತರುಣಿ ತಾನು ಕೆಲಸ ಮಾಡುತ್ತಿದ್ದ ಮನೆಯ ಮಾಲೀಕನ ತರುಣ ಮಗನು, ತಾನು ಮಲುಗುವ ಸ್ಥಳದಲ್ಲಿದ್ದ, ಸೋಫಾದ ಮೇಲೆ ಮಲಗುತ್ತಿದ್ದ. ಮುಂದೆ ಜರುಗಬಹುದಾದಂತಹ ಅನಾಹುತದ ಬಗ್ಗೆ ಎಚ್ಚರ ವಹಿಸಿ ಬೇರೆ ಕಡೆ ಕೆಲಸ ಕೊಡಿಸಿ ಎಂದು ಆ ಜಾಗವನ್ನು ಬಿಟ್ಟು ಬಂದ ಕಥೆ ವಿವರಿಸಿದಳು. 'ಮನೆ ಕೆಲಸ'ದ ಕಾರ್ಮಿಕ ಮಹಿಳೆಯರು ದುಡಿಯುವ ಸ್ಥಳದಲ್ಲಿ ಲೈಂಗಿಕ ಕಿರುಕುಳದಿಂದ ಯಾವ ರೀತಿ ಮುಕ್ತರಾಗಬಹುದು ಎಂಬ ಚರ್ಚೆ ದೀರ್ಘವಾಗಿ ನಡೆಯಿತು. ಈಗಾಗಲೇ ಸಂಘಟಿತರಾಗಿರುವ ಮಹಿಳೆಯರು ಮೊಟ್ಟ ಮೊದಲಿಗೆ ಸಂಘಟನೆಗೆ ವಿಷಯ ತಿಳಿಸಿ ಸಹಾಯ ಕೋರಬೇಕು. ಸಂಘಟನೆಯವರು ಆ ಮಹಿಳೆಯನ್ನು ತತ್‌ಕ್ಷಣವೇ ಆ ಜಾಗದಿಂದ ಸಂರಕ್ಷಿತವಾಗಿ ಹೊರತರಬೇಕು. ಸಂಘಟನೆಯು ಮನೆಯ ಮಾಲೀಕರೊಂದಿಗೆ ಈ ಸಮಸ್ಯೆಯ ಕುರಿತು ವಿಚಾರ ಮಾಡಬೇಕು. ಎಲ್ಲವೂ ಸರಿಯಾಗಿದ್ದ ಸಂದರ್ಭದಲ್ಲಿಯೂ ಸಹ ಆಗಾಗ್ಗೆ ಒಬ್ಬರಿಗೊಬ್ಬರು ದೂರವಾಣಿಯ ಮೂಲಕ ಮಾತನಾಡಿಕೊಳ್ಳಬೇಕು.

ಮಾಲೀಕರು ಒಂದು ವೇಳೆ ಆಕೆಗೆ ದೂರವಾಣಿಯ ಮೂಲಕ ಮಾತನಾಡಲು ಬಿಡದಿದ್ದಲ್ಲಿ ಸಂಶಯಪಟ್ಟು, ತಕ್ಷಣವೇ ಕಾರ್ಯಗತರಾಗಬೇಕು ಎಂಬ ಸಲಹೆ ಸೂಚನೆಗಳಿಗೆ ಸ್ಪಂದಿಸಿದರು.

**ಟಿ. ಬಿ. ಆಸ್ಪತ್ರೆಯ ದಾದಿಗಳೊಂದಿಗೆ**

ಅಮಾನತ್ತಿಗೆ ಒಳಗಾದ ಎಲ್.ಆರ್.ಎಸ್. ಆಸ್ಪತ್ರೆಯ ನಿರ್ದೇಶಕ ಡಾ. ವಿ. ಕೆ. ಅರೋರರವರು ಮತ್ತೆ ಕೆಲಸಕ್ಕೆ ಹಾಜರಾಗಿದ್ದಾರೆ ಎಂಬ ಸುದ್ದಿ ತಿಳಿದು ಸಿಡಿದೆದ್ದೆವು. ಈ ನಿರ್ದೇಶಕ ಅಲ್ಲಿ ದುಡಿಯುತ್ತಿರುವ ದಾದಿಗೆ ಲೈಂಗಿಕ ಕಿರುಕುಳ ನೀಡಿದ್ದಕ್ಕೆ ಅಮಾನತ್ತಿಗೆ ಒಳಗಾಗಿದ್ದ. ವಿಚಾರಣೆ ನಡೆದ ಬಳಿಕ ಯಾವ ದೋಷಾರೋಪಣೆ ಇಲ್ಲದೆ ಕೆಲಸಕ್ಕೆ ಹಾಜರಾಗಿದ್ದ. ಆಸ್ಪತ್ರೆ ಸಿಬ್ಬಂದಿ ವರ್ಗದ ಕಾರ್ಮಿಕ ಸಂಘಟನೆಯನ್ನು ಸಂಪರ್ಕಿಸಿ ಒಂದು ನಾಟಕ ಪ್ರದರ್ಶನ ಏರ್ಪಡಿಸಿದೆವು.

ಅಲ್ಲಿ ಲೈಂಗಿಕ ಕಿರುಕುಳದ ಘಟನೆ ನಡೆದಿದ್ದರಿಂದ ಚರ್ಚೆ ಬಿಸಿ ಏರಿ ಗಂಭೀರ ಸ್ವರೂಪ ತಳೆಯಿತು. ಸಾಕಷ್ಟು ಕಾಲಾವಕಾಶ ನೀಡಿದ್ದಲ್ಲಿ ಎಲ್ಲರೂ ಮನ ಬಿಚ್ಚಿ ಮಾತನಾಡುತ್ತಿದ್ದರು. ಪರಿಸ್ಥಿತಿ ಸಂಪೂರ್ಣವಾಗಿ ನಮ್ಮ ಹತೋಟಿಯಲ್ಲಿ ಇರದಿದ್ದ ಕಾರಣ ಚರ್ಚೆಗೆ ಹೆಚ್ಚು ಸಮಯ ನೀಡಲಾಗಲಿಲ್ಲ. ಅಲ್ಲಿ ನಡೆದ ಘಟನೆಯ ಸುತ್ತ ಗಮನ ಸೆಳೆಯುವುದಕ್ಕೆ ಮಾತ್ರ ನಮ್ಮ ನಾಟಕ ಪ್ರದರ್ಶನ ಸೀಮಿತವಾಗಿ ಹೋಗಿದ್ದು ನಮಗೆ ತಿಳಿಯಿತು. ಅಲ್ಲಿನ ಸಿಬ್ಬಂದಿ ವರ್ಗದ ಕೆಲಸಗಾರರೊಂದಿಗೆ ಸಾಕಷ್ಟು ಸಮಯ ಕಳೆಯುವ ಅವಶ್ಯಕತೆ ಇದೆ ಎಂದು ಮನಗಂಡೆವು. ಈ ನಾಟಕ ಪ್ರಕ್ರಿಯೆಯ ಒಂದು ಭಾಗವೇ ಹೊರತು, ಕೇವಲ ಈ ಸಂದರ್ಭಕ್ಕಷ್ಟೆ ಸೀಮಿತಲ್ಲವೆಂಬುದು ಅರಿವಾಯಿತು.

**ತಪ್ಪಿಹೋದ ಕೆಲವು ಕೊಂಡಿಗಳು :**

ನಾವು ನೀಡಿದ ಕೆಲವು ಪ್ರದರ್ಶನಗಳು ಪರಿಣಾಮ ಬೀರಲಿಲ್ಲ. ನಾವೆಲ್ಲರೂ ಕುಳಿತು ಆಳವಾಗಿ ವಿಶ್ಲೇಷಿಸಿಕೊಂಡೆವು. ಗಲಭೆಯ ವಾತಾವರಣವೇ, ನಟನೆಯ ಕೊರತೆಯೇ ನಾವು ಆರಿಸಿಕೊಂಡ ವಿಷಯ ಮುಖ್ಯವಲ್ಲವೇ ಅಥವಾ ಇನ್ನಾವುದಾದರೂ ವಿಷಯ ಕಾರಣವೇ ಎಂದು ತಿಳಿಯಲಿಲ್ಲ.

ಮೊಟ್ಟ ಮೊದಲಿಗೆ "ಮಾಹೋಲ್ ಬದಲ್‌ನಾ ಹೇ" ಎಂಬ ನಾಟಕವನ್ನು ನಾವು ದೆಹಲಿಯ ಹೊರವಲಯದಲ್ಲಿ ಪ್ರದರ್ಶಿಸಿದ್ದೆವು. ಇದು ಒಂದು ಬೀದಿ ನಾಟಕದ ರೂಪದಲ್ಲಿತ್ತು. ಇದರ ಪ್ರದರ್ಶನದಲ್ಲಿ ನಾವು ಪಟ್ಟ ಬವಣೆ ಅಷ್ಟಿಷ್ಟಲ್ಲ. ರಂಗ ತರಬೇತಿಯೇ ಇಲ್ಲದ ನಾವು, ಜನ ಜಂಗುಳಿಯ ಗಲಾಟೆ ಒಂದು ಕಡೆ, ಇದ್ದಕ್ಕಿದ್ದಂತೆ ಆರಿದ ಬೀದಿ ದೀಪಗಳು, ಪ್ರೇಕ್ಷಕರ ಗಮನ ಸೆಳೆಯಲು ಸೋತು, ಚರ್ಚೆ ಸಂವಾದಗಳಿಲ್ಲದೆ ಬಸವಳಿದು ಮನೆಗೆ ನಡೆದದ್ದು ಮರೆತಿರಲಿಲ್ಲ.

ಈ ಅನುಭವಗಳ ಹಿನ್ನೆಲೆಯಲ್ಲಿ ನಾವು ತೆಗೆದುಕೊಂಡ ಮೊದಲ ನಿರ್ಧಾರ ಎಂದರೆ ಈ ನಾಟಕ ಪ್ರದರ್ಶನವನ್ನು ಬೀದಿ ಮೂಲೆಯಲ್ಲಿ ಮಾಡದಿರುವುದು. ಮೊದಲೇ ತಯಾರಾಗಿ ವೀಕ್ಷಿಸಲು ಬಂದ ಪ್ರೇಕ್ಷಕ ವೃಂದಕ್ಕೆ ಮಾತ್ರ ನಮ್ಮ ನಾಟಕ ಪ್ರದರ್ಶನ ಮೀಸಲು ಚರ್ಚೆ ಸಂವಾದಗಳಿಗೆ ಅವಕಾಶವಿರುವ ಸ್ಥಳಗಳಲ್ಲಿ ಪ್ರದರ್ಶನ ನೀಡುವುದರಿಂದ ಸ್ಥಳೀಯ ಗುಂಪು/ಸಂಘಗಳು ಮುಂದೆ ಬಂದು ಈ ರೀತಿಯ ಘಟನೆಯನ್ನು ಕೈಗೆತ್ತಿಕೊಂಡು ವಿಚಾರ ಮಾಡುವಂತೆ ಇರಬೇಕು. ಅಥವಾ ನಾವೇ ಮತ್ತೊಮ್ಮೆ ಆ ಜಾಗಕ್ಕೆ ಮರಳಿ ಹೋಗಿ ಬರುವಂತಾಗಿರಬೇಕು.

ಈ ನಾಟಕ ಪ್ರದರ್ಶನದ ಎರಡು ಬೇರೆ ಬೇರೆ ಸಂದರ್ಭಗಳಲ್ಲಿ (ಬಸ್ತಿಗಳಲ್ಲಿ ಮಾಡಿದ್ದು) ಹಲವಾರು ವಿಷಯಗಳನ್ನು ಕಲಿತೆವು. ರಂಗವೇ ಇಲ್ಲದ, ಸಣ್ಣ ಕತ್ತಲ ಕೋಣೆಯಲ್ಲಿ, ಗಿಜಿ-ಗಿಜಿ ಮಕ್ಕಳ ಗಲಾಟೆ ಇದ್ದರೂ ನಾಟಕ ಪ್ರದರ್ಶನ ಕಂಡಿತು. ನಮ್ಮ ಕಾರ್ಯ ಸೂಚಿಗೂ ಅಲ್ಲಿ ನೆರೆದ ಮಹಿಳಾ ಪ್ರೇಕ್ಷಕರಿಗೂ ಅಜಗಜಾಂತರ ವ್ಯತ್ಯಾಸವಿತ್ತು. ಕೆಲವು ಮಹಿಳೆಯರನ್ನು ಬಿಟ್ಟು, ಎಲ್ಲರೂ ಗೃಹಿಣಿಯಾಗಿದ್ದರು, ಮನೆಯಿಂದ ಹೊರಗೆ ಕೆಲಸಕ್ಕೆ ಹೋಗು ತ್ತಿರಲಿಲ್ಲ. ದುಡಿಯುವ ಸ್ಥಳದಲ್ಲಿ ಮಹಿಳೆ ಅನುಭವಿಸುವ ಲೈಂಗಿಕ ಕಿರುಕುಳ ಅವರಿಗೆ ಮುಖ್ಯ ಎನಿಸಲಿಲ್ಲ. ಈ ವಿಷಯ ಒಂದು ಬಿಟ್ಟು ಬೇರೆಲ್ಲಾ ವಿಷಯಗಳು ಚರ್ಚೆಗೆ ಬಂದವು. ಹೆಂಡತಿಗೆ ಹೊಡೆಯುವುದು, ಕುಡಿತದ ಚಟ, ಕೌಟುಂಬಿಕ ಹಿಂಸೆ, ಶಿಕ್ಷಣ ವ್ಯವಸ್ಥೆಯ ಕೊರತೆ, ನಿರುದ್ಯೋಗ ಸಮಸ್ಯೆ ಬಗ್ಗೆ ಸಾಕಷ್ಟು ಚರ್ಚೆಯಾದವು. ಆ ಸಂದರ್ಭದಲ್ಲಿ ಈ ವಿಷಯಗಳ ಬಗ್ಗೆ ಸ್ಪಂದಿಸಲು ನಾವು ತಯಾರಾಗಿರಲಿಲ್ಲ. ನೆರೆದ ಪ್ರೇಕ್ಷಕರ ಸ್ವಭಾವದ ಪರಿಚಯ ಮೊದಲೇ ತಿಳಿದಿದ್ದಲ್ಲಿ ನಾಟಕ ಪ್ರದರ್ಶನ ಹೆಚ್ಚು ಪರಿಣಾಮಕಾರಿಯಾಗಬಹುದು ಎಂದು ಅರಿತೆವು.

**ಮಹಿಳೆ, ಪುರುಷರಿಂದ ಬಂದ ಪ್ರತಿಕ್ರಿಯೆ-ಒಂದು ವಿಶ್ಲೇಷಣೆ**

ದುಡಿಯುವ ಸ್ಥಳಗಳಲ್ಲಿ ಲೈಂಗಿಕ ಕಿರುಕುಳದ ಪ್ರಸ್ತಾಪವೆತ್ತಿದಾಗ ನಾವು ಪುರುಷರನ್ನು ಉದ್ದೇಶಿಸಿ ಮಾತನಾಡಲೇ ಬೇಕಾದ ಅನಿವಾರ್ಯತೆಯನ್ನು ಕಂಡುಕೊಂಡಿದ್ದೆವು. ಅವರೊಂದಿಗೆ ಉಪಯುಕ್ತ ಸಂವಾದ ಏರ್ಪಡಿಸಿ ನಮ್ಮ ಉದ್ದೇಶವನ್ನು ನಾವು ಹೇಳಲೇಬೇಕಾಗಿತ್ತು. ಕಾರ್ಮಿಕ ಸಂಘಟನೆಗಳ ನಾಯಕರು ಈ ವಿಷಯದ ಬಗ್ಗೆ ಹೆಚ್ಚು ಆಸ್ತೆ ತೋರಿದಂತೆ ಕಂಡುಬಂದರೂ, ಇದನ್ನು ಸೂಕ್ಷ್ಮವಾಗಿ ಬಗೆಹರಿಸುವ ರೀತಿ ನೀತಿಗಳ ಬಗ್ಗೆ ಅರಿವು ಇರಲಿಲ್ಲ. ಚರ್ಚೆ ಮೊದಲಾಗುವ ಸ್ವಲ್ಪ ಹೊತ್ತಿನಲ್ಲಿ "ಈ ಹೆಂಗಸರು ತಮ್ಮ ವೈಯಕ್ತಿಕ ವಿಷಯಗಳ ಬಗ್ಗೆ ಬಾಯಿ ಬಿಡುವುದೇ ಇಲ್ಲ" ಎಂದು ಚರ್ಚೆಯನ್ನು ಅಂತ್ಯಗೊಳಿಸುತ್ತಿದ್ದರು. ಪರಿಸ್ಥಿತಿಯ

ಹತೋಟಿ ಮೀರದಂತೆ ನಮ್ಮ ಹಿಡಿತದಲ್ಲಿ ಇದ್ದ ಹಲವಾರು ಸಂದರ್ಭಗಳಲ್ಲಿ ಚರ್ಚೆ ಸರಾಗವಾಗಿ ನಡೆಯುತ್ತಿತ್ತು.

ಮಹಿಳೆಯರು ಮೇಲೆ ನಡೆಯುವ ಹಿಂಸೆ ತಾರಕಕ್ಕೆ ಮುಟ್ಟಿರುವ ಈ ಸಮಯದಲ್ಲಿ "ಕ್ಷುಲ್ಲಕ" ಲೈಂಗಿಕ ಕಿರುಕುಳದ ವಿಷಯದ ಬಗ್ಗೆ ಒತ್ತು ನೀಡುವುದಾದರೂ ಯಾಕೆ? ಎಂದು ಮಹಿಳಾ ಪುರುಷರಿಬ್ಬರು ಹಲವಾರ ಸಂದರ್ಭದಲ್ಲಿ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ. ಚರ್ಚೆ ಮುಂದುವರಿದಂತೆ, ಪುರುಷರಿಗೆ ಇದು "ಕ್ಷುಲ್ಲಕ" ವಿಷಯವಾಗೇ ಉಳಿದು, ಮಹಿಳೆಯರಿಗೆ ದಿನ ನಿತ್ಯದ ಬವಣೆ ಎಂದು ಭಿನ್ನ ರೀತಿಯಲ್ಲಿ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಿದ್ದರು.

ಪುರುಷ ಪಾತ್ರವನ್ನು ಪುರುಷರೇ ನಿರ್ವಹಿಸಿದಲ್ಲಿ ನೋಡುಗರಿಗೆ ಇನ್ನೂ ಸಮರ್ಪಕವಾಗಿ ಹಿಂಸೆಯ ಸ್ವರೂಪ ತಿಳಿಯುತ್ತಿತ್ತು ಎಂದು ಪುರುಷರು ಅಭಿಪ್ರಾಯಪಟ್ಟರು. ಹಿಂಸೆಯ ಸ್ವರೂಪವನ್ನು ಮಹಿಳಾ ದೃಷ್ಟಿಕೋನದಿಂದ ನೋಡುವುದಕ್ಕೆ ಹೆಚ್ಚು ಒತ್ತುನೀಡಿದ್ದೆವು. ಆಕೆಯ ಭಾವನೆಗಳು, ಪ್ರತಿಕ್ರಿಯೆಗಳು ನಾಟಕದ ಮೂಲ ಉದ್ದೇಶವಾಗಿದ್ದವು. ಪುರುಷ ಪಾತ್ರದಾರಿಯನ್ನು ಶೋಷಿಸುವ ವ್ಯಕ್ತಿಯನ್ನಾಗಿ, ಮಹಿಳಾ ಪಾತ್ರದಾರಿಯನ್ನು ಆತನ ಬಲಿಪಶು/ವಸ್ತುವಾಗಿ ಜನರಿಗೆ ತೋರಿಸುವುದು ನಮಗೆ ಸರಿ ಕಾಣಿಸಲಿಲ್ಲ. ಆಕಸ್ಮಾತ್ ಹಾಗೆ ತೋರಿಸಿದಲ್ಲಿ ಅದು ಹಾಸ್ಯಾಸ್ಪದವಾಗಿಬಿಡುತ್ತಿತ್ತು.

ಪುರುಷ ಪಾತ್ರಧಾರಿಯ ಕೊರತೆ ಪುರುಷ ಪ್ರೇಕ್ಷಕರಲ್ಲಿ ಹೆಚ್ಚು ಕಾಣಿಸಿತು. ಆದರೆ ಮಹಿಳಾ ಪ್ರೇಕ್ಷಕರು ಪುರುಷರ ಪಾತ್ರಧಾರಿಯ ಕೊರತೆ ಅನುಭವಿಸಲಿಲ್ಲ. ಮಹಿಳೆಯರು ಇಂತಹ ಕಾನೂನಿನ ದುರುಪಯೋಗ ಪಡೆಯುತ್ತಾರೆ ಎಂಬ ಅಭಿಪ್ರಾಯ ಮೂಡಿಬಂತು.

ಪುರುಷರೊಂದಿಗಿನ ಸಂವಾದ ನಮಗೆ ಪ್ರಯಾಸದ ಕೆಲಸವಾಗಿತ್ತು. ಸಾಕಷ್ಟು ಸಹನೆ ಮತ್ತು ಸೂಕ್ಷ್ಮ ರೀತಿಯಲ್ಲಿ ಚರ್ಚೆ ನಡೆಸಬೇಕಾಗಿತ್ತು. ವಾದ ವಿವಾದಗಳ ಯುದ್ಧ ಹೂಡಿ ನಮ್ಮ ಉದ್ದೇಶ ಹೇಳಬಹುದಿತ್ತು. ತಕ್ಷಣವೇ ಅವರ ಪ್ರಜ್ಞೆ ಜಾಗ್ರತೆಗೊಂಡು ಎಳ್ಳಷ್ಟೂ ತಮ್ಮನ್ನು ಬಿಟ್ಟುಕೊಡುತ್ತಿರಲಿಲ್ಲ. ವೈಯಕ್ತಿಕ ಅಭಿಪ್ರಾಯ ವ್ಯಕ್ತಪಡಿಸಿ, ಕೆಲಸಕ್ಕೆ ಬಾರದ ಅನೇಕ ಕ್ಷುಲ್ಲಕ ಸವಾಲು ಎಸೆಯುತ್ತಿದ್ದರು. ಚರ್ಚೆಯು ಹಿಡಿತದಿಂದ ತಪ್ಪಿಸಿಕೊಂಡು ಹೋಗುತ್ತಿತ್ತು. ಚರ್ಚೆಯ ಹಲವಾರು ಸಂದರ್ಭಗಳಲ್ಲಿ ನೀವು ನಾವು ಎಲ್ಲರೂ ಕೂಡಿ ಬದಲಾವಣೆಗೆ ಪ್ರಯತ್ನಸಿಬೇಕು ಎಂದು ಹೇಳುತ್ತಿದ್ದೆವು. ಮತ್ತೆ ಕೆಲವು ಚರ್ಚೆಗಳಲ್ಲಿ ಪುರುಷರು ಸಹನೆಯಿಂದ ವರ್ತಿಸುತ್ತಿದ್ದರು. ಇದೇ ರೀತಿಯ ಸತತ ಪ್ರಯತ್ನದಿಂದ ಪರಸ್ಪರ ಅರ್ಥ ಮಾಡಿಕೊಳ್ಳುವ ಹಂತ ತಲುಪಲು ಸಾಧ್ಯವಿದೆ ಅಂತ ನಮಗೆ ಅನಿಸಿತು.

**ಅಂತಿಮವಾಗಿ :**

ಅಂತಿಮವಾಗಿ ನಾವು ಅಂದುಕೊಂಡಿದ್ದನ್ನು ಸಾಧಿಸಿದ್ದೇವೆಯೇ? 'ಯಶಸ್ವಿ' ಎಂಬ ಪದ ಬಹಳ ದೊಡ್ಡದು. ನಾಟಕದ ಪ್ರತಿ ಪ್ರದರ್ಶನದ ನಂತರ ಕಾವೇರುತ್ತಿದ್ದ ವಾತಾವರಣ ಹೆಚ್ಚು ಅರ್ಥ ನೀಡುವುದೇ? "ಲೈಂಗಿಕ ಕಿರುಕುಳ" ಎಂಬುದನ್ನು ಸಹೇಲಿಯ ಬಳಗ ಯಾವ ರೀತಿಯಲ್ಲಿ ಅರ್ಥ ಮಾಡಿಕೊಳ್ಳಲು ನಾಟಕ ಸಹಾಯವಾಗಿದೆ?

ಜಟಿಲ, ಸೂಕ್ಷ್ಮ ವಿಚಾರವನ್ನು ಚರ್ಚೆಗೆ ತರುವ ಕೆಲಸ ಒಂದು ಸವಾಲು. ಅನೇಕ ಮಹಿಳೆಯರೊಡನೆ ಸಂವಾದ ಏರ್ಪಟ್ಟಿದ್ದು, ಮೊದಲು ಮೌನದಿಂದ ಇದ್ದರೂ ನಂತರ ಮನಬಿಚ್ಚಿ ಮಾತನಾಡಿದ್ದು, ಹಲವಾರು ಪ್ರಶ್ನೆಗಳ ಉತ್ತರ ಹುಡುಕುವ ಪ್ರಕ್ರಿಯೆಯೊಂದಿಗೆ ನಮ್ಮೊಡನಿದ್ದುದು ನಮ್ಮೆಲ್ಲರ ಮನ ಮುಟ್ಟಿತು.

ಸಮಸ್ಯೆಗೆ ಪರಿಹಾರ ಸೂಚಿಸುವಾಗ ಮತ್ತು ದೂರು ನಿವಾರಣೆ ಕೇಂದ್ರದ ಬಗ್ಗೆ ಚರ್ಚೆ ನಡೆಸುವಾಗ ಚರ್ಚೆ ಬಹಳ ಸಂಕೀರ್ಣಗೊಳ್ಳುತ್ತಿತ್ತು. ಮಹಿಳೆಯರು ದುಡಿಯುವ ಹಲವಾರು ಕ್ಷೇತ್ರಗಳಲ್ಲಿ ಇಂತಹ ನಿವಾರಣಾ ಕೇಂದ್ರ ಇಲ್ಲದಿರುವುದರಿಂದ ಪರಿಹಾರ ಸೂಚನೆ ಅಸಂಬದ್ಧ ವಾಗುತ್ತಿತ್ತು. ನಿವಾರಣಾ ಕೇಂದ್ರ ಅಸ್ತಿತ್ವದಲ್ಲಿ ಇದ್ದ ಸಂದರ್ಭದಲ್ಲಿ ಆ ಕೇಂದ್ರದ ರಚನೆ, ಅದು ಕೆಲಸ ಮಾಡುವ ರೀತಿ ನೀತಿಗಳ ಸುತ್ತಲೇ ಚರ್ಚೆ ಮುಂದುವರೆಯುತ್ತಿತ್ತೇ ವಿನಹಃ ಅದರ ಉಪಯುಕ್ತತೆಯ ಕುರಿತು ವಿಚಾರ ವಿನಿಮಯ ಸಾಧ್ಯವಾಗುತ್ತಿರಲಿಲ್ಲ. "ಸಂಪೂರ್ಣ ಪರಿಹಾರ"ವೆಂಬ ಮಿಥ್ಯೆಯತ್ತಲೇ ನಮ್ಮ ಚರ್ಚೆಗಳು ಸಾಗುತ್ತಿದ್ದವು.

ಹಲವಾರು ಬಾರಿ ನಮಗೆ ಸುಪ್ರೀಂ ಕೋರ್ಟಿನ ಆದೇಶವು ಅಸಂಗತ/ಬೇಸರ/ಪ್ರಯಾಸಕರವೆನಿಸಿದರೂ, ಮಹಿಳೆಯರು ಅನುಭವಿಸುತ್ತಿರುವುದಕ್ಕೆ ಹತ್ತಿರವಾಗಿಲ್ಲವೆನಿಸಿದರೂ, ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಉಪಯುಕ್ತ ಅಸ್ತ್ರವಾಗಿ ಬಳಸಿಕೊಳ್ಳಬಹುದೆಂದು ಅನಿಸಿದೆ. ಇಂತಹ ಆದೇಶದ ಇರುವಿಕೆಯ ಬಗ್ಗೆ ಜನರಿಗೆ ಅರಿವು ಮೂಡಿಸುವುದು ಮುಖ್ಯವೆನಿಸಿತು. ಕಾನೂನಿನ ಅಡಿಯಲ್ಲಿ ಸಿಗುವ ಯಾವ ಪರಿಹಾರವಾದರೂ ಸರಿ ಸಮಾಜದಲ್ಲಿ ಹೆಚ್ಚು ಬದಲಾವಣೆ ಯನ್ನು ತರಲಾರದು. ಅದರ ಜೊತೆಗೆ ಜನರ ಮನಸ್ಸು ಪರಿವರ್ತನೆಗೊಂಡಲ್ಲಿ ಹೆಚ್ಚು ಉಪಯುಕ್ತ ಬದಲಾವಣೆ ಯನ್ನು ಆಶಿಸಬಹುದು.

ಆಧಾರ: ದೆಹಲಿಯ ಸ್ವಾಯತ್ತ ಮಹಿಳಾ ಸಂಘಟನೆ-ಸಹೇಲಿಯವರ,
**'ಸಹೇಲಿ' ಪತ್ರಿಕೆ**

ಕನ್ನಡಕ್ಕೆ : ವತ್ಸಲ ಮತ್ತು ಸವಿತ

# 'ಮುಕ್ತ ನಾಟಕ'

○ ಚಿತ್ರಾ ಎಸ್.

**ಬೀದಿ** ನಾಟಕ ಎಂದ ಕೂಡಲೇ ನೆನಪಾಗುವುದು ಬಾದಲ್ ಸರ್ಕಾರರ ಹೆಸರು. ಬೀದಿ ನಾಟಕ ಅಥವಾ ಮುಕ್ತ ನಾಟಕದ ರೂಪವನ್ನು ದೇಶಾದ್ಯಂತ ಹಂಚಿದವರು ಬಾದಲ್ ಸರ್ಕಾರ್.

ಸುಮಾರು 1955-60ರ ಕಾಲ.

ಭಾರತೀಯ ಸಿನಿಮಾ ಶರವೇಗದಲ್ಲಿ ಬೆಳೆಯುತ್ತಿದ್ದ ಕಾಲ. ಎಷ್ಟೊಂದು ನಟರು ನಟಿಯರು! ಸಂಗೀತವೇನು ಹಾಡುಗಳೇನು! ಆ ಭರ್ಜರಿ ಸೀನ್‌ಗಳೋ ಮಾಯಾನಗರಿಯನ್ನೇ ಕಣ್ಮುಂದೆ ನಿಲ್ಲಿಸುವಂತಿತ್ತು. ಕೆಲವೇ ಆಣೆ/ಕಾಸು ರೂಪಾಯಿಗಳಿಗೆ ಮೂರು ಗಂಟೆಕಾಲ ಮನರಂಜನೆ! ಯಾರಿಗೆ ಬೇಡ?

ಇಂತಹ ಸಿನಿಮಾಗಳ ವೈಭವದ ಕಾಲದಲ್ಲಿ ನಾಟಕಗಳನ್ನು ನೆಚ್ಚಿಕೊಳ್ಳುವುದಾದರೂ ಹೇಗೆ? ಸಿನಿಮಾಗೆ ಸವಾಲಾಗಬೇಕಾದರೆ ದುಬಾರಿಯಾದ ಬೃಹತ್ ಸೆಟ್‌ಗಳು, ಅದ್ದೂರಿ ಲೈಟಿಂಗ್, ಝಗಮಗಿಸುವ ವೇಷಭೂಷಣಗಳು. ಇವೆಲ್ಲವುಗಳ ಸಾಗಣೆ ಖರ್ಚು, ಸಂಗೀತಕಾರರನ್ನು ನಟ-ನಟಿಯರನ್ನು ಸಾಕುವ ಖರ್ಚು, ಅಬ್ಬಬ್ಬ ಒಂದೊಂದು ಶೋಗೆ ಎಷ್ಟೊಂದು ಖರ್ಚು! ಇಷ್ಟೆಲ್ಲ ಇದ್ದರೂ ಅಸಲು ವಾಪಸ್ಸಾಗುವುದೇ? ಎಷ್ಟು ಮರು ಪ್ರದರ್ಶನಗಳಾಗಬೇಕು? ಸಿನಿಮಾ ಟಿಕೆಟ್‌ನ ಹತ್ತು ಪಟ್ಟು ಟಿಕೆಟ್ ದರ ತೆತ್ತು ನಾಟಕ ನೋಡುವವರಾದರೂ ಯಾರು? ನಾಟಕ ಆಡಲು ದೇಹಿ ಎಂದು ಯಾವ್ಯಾವ ಕುಳಗಳ ಕಾಲು ಹಿಡಿಯಬೇಕೋ, ಸಾಷ್ಟಾಂಗ ಮಾಡಬೇಕೋ! ಸಿನಿಮಾ ಒಮ್ಮೆ ತಯಾರಾದರೆ ಅದರ ಖರ್ಚು ಮುಗಿಯಿತು. ಮುಂದೆ ಏನಿದ್ದರೂ ನೋಡುಗರಿಂದ ಸಿಗುವಂಥದ್ದು. ನಾಟಕ ಹಾಗಿಲ್ಲವಲ್ಲ.

ಹಾಗಾದರೆ ದಣಿಗಳ ಅಸ್ತು ಇಲ್ಲದೆ, ಬರೇ ಮೇಲು ವರ್ಗದ ಪ್ರೇಕ್ಷಕರಿಗೆ ಮಾತ್ರವಲ್ಲದೆ (ಟಿಕೆಟ್ ಕೊಳ್ಳುವ ಯೋಗ್ಯತೆ ಉಳ್ಳವರು) ನಾಟಕವನ್ನು ಆಡಿಸುವುದಾದರೂ ಹೇಗೆ? - ಉಳಿಸಿ ಬೆಳೆಸುವುದಾದರೂ ಹೇಗೆ? ಭಾರತದಂಥ ಬಡ ದೇಶದಲ್ಲಿ ನಾಟಕದಂಥಹ ಜನ ಮಾಧ್ಯಮಗಳು, ಕಲಾ ಮಾಧ್ಯಮಗಳು ಸಿರಿವಂತರ ಕೃಪೆ ಇಲ್ಲದೆ ಸಾಧ್ಯವೇ?

ಬುದ್ಧಿ, ವಿಚಾರ, ಸಂಸ್ಕೃತಿ, ಕಲೆ ಯಾರಪ್ಪನ ಮನೆಯ ಗಂಟೂ ಅಲ್ಲ ಅಲ್ಲವೇ. ಬಾದಲ ಸರ್ಕಾರರು ನಿರಾಶೆಯಾಗದೆ ಪಾಸಿಟಿವ್ ಆಗಿ ಯೋಚಿಸಿದರು. ಬಾದಲ ದಾ ಹೇಳುತ್ತಾರೆ : ನಾಟಕ ಅಥವಾ ಯಾವುದೇ ಮಾಧ್ಯಮ, ಕಲೆ ಹಣದ ಮುಷ್ಟಿಯಿಂದ ಬಿಡುಗಡೆ ಪಡೆಯಬೇಕು. ಟಿಕೆಟ್ ಕೊಳ್ಳಲಾರದ ಬಡ ಜನರೂ ನಾಟಕ ನೋಡುವ, ಆಡುವ ಅವಕಾಶ ಬೆಳೆಯಬೇಕು. ನಾಟಕ ಹಾಂ....ಯಾರಪ್ಪನ....? ಹಾಗಾದರೆ ಏನು ಮಾಡಬೇಕು? ನಮ್ಮ ಬುದ್ಧಿ, ದೇಹಗಳೇ ನಮ್ಮ ಸಂಪತ್ತು, ಹಾಗೆಂದರೇನು? ಲಕ್ಷ ರೂಪಾಯಿ ಖರ್ಚುಮಾಡಿ ಶ್ರೀಕೃಷ್ಣ ಗೋಪಿಕೆಯರ ವಸ್ತ್ರಗಳನ್ನು ಹೇಗೆ ಅಪಹರಿಸಿದ ಎಂಬಂತಹ ಕ್ಷುಲ್ಲಕ ಸೀನ್‌ಗಳನ್ನು ಮಾಡುವ ಬದಲು ನಮ್ಮ ಬದುಕು ಕೊಟ್ಟ ಬವಣೆ, ವಿಶ್ವಾಸ, ಶಕ್ತಿಗಳು, ಅನುಭವಗಳು, ಅನಿಸಿಕೆ ಆಶೋತ್ತರಗಳನ್ನು ಪ್ರತಿಬಿಂಬಿಸುವ ನಾಟಕಗಳನ್ನು ಆಡಬೇಕು.

ಹೋ ಎಂದು ಗಟ್ಟಿದನಿಯಲ್ಲಿ ಡೈಲಾಗ್ ಒದರಿ ಹೋಗುವ (ಮೈಕ್ ಮುಂದೆಯೇ ನಿಂತು) ಪಾತ್ರಗಳೇ ನಾಟಕವಾಗಿ ಬಿಡುವ ಸಂದರ್ಭಗಳೇ ಹೆಚ್ಚು. ನಮ್ಮ ದೇಹವೆಂದರೆ ಬರೀ ಬಾಯಿ, ಗಂಟಲಲ್ಲ; ಕಥಾವಸ್ತು, ಎಂದರೆ ಪುರಾಣಗಳಷ್ಟೇ ಅಲ್ಲ; ಸೆಟ್ ಎಂದರೆ ಲಾರಿಯಲ್ಲಿ ಹೊತ್ತು ತರುವಂಥದಲ್ಲ; ಲೈಟಿಂಗ್ ಎಂದರೆ ತಲೆ ತಿರುಗಿಸುವ ಹಳದಿ ನೀಲಿ ಹಸಿರು ಬಣ್ಣಗಳಲ್ಲ, ರಂಗವೆಂದರೆ ದೊಡ್ಡ ಸ್ಟೇಜ್, ಎದುರಿಗೆ ಕತ್ತಲಲ್ಲಿ ಸಾಲಾಗಿ ಜೋಡಿಸಿಟ್ಟ ಖುರ್ಚಿಗಳಲ್ಲ; ನಟ-ನಟಿಯರೆಂದರೆ ಸ್ಫುರದ್ರೂಪಿಯಾದ ಗಂಡಸು ಹೆಂಗಸರಲ್ಲ. ಒಂದು ನಾಟಕ ತಯಾರಾಗಲು ಇವೆಲ್ಲವನ್ನೂ, ಇನ್ನೂ ಹಲವನ್ನು ಹೇಗೆ ಬಳಸಿಕೊಳ್ಳುವುದು ಎಂದು ತಲೆ ಕೆಡಿಸಿಕೊಳ್ಳುವವರೇ ಹೆಚ್ಚು. ಬಾದಲ್ ಸರ್ಕಾರ, ಒಂದೊಂದಾಗಿ ಇದನ್ನು ಬಿಟ್ಟರೆ ಹೇಗೆ, ಇದನ್ನು ಕಡಿಮೆ ಮಾಡಿದರೆ ಹೇಗೆ, ಇದನ್ನು ಬೇರೆ ರೀತಿ ಹೇಗೆ ಬಳಸಿಕೊಳ್ಳಬಹುದು ಎಂಬುದನ್ನು ಬಹಳ ಆಳವಾಗಿ ಯೋಚಿಸುತ್ತ ನಾಟಕವನ್ನು ಅತ್ಯಂತ ಕಡಿಮೆ ಖರ್ಚಿನಲ್ಲಿ ಆಡಿಸುವಲ್ಲಿ, ಸಾಗಿಸುವಲ್ಲಿ (ಸೂಟ್‌ಕೇಸಿನಲ್ಲಿ ಅಥವಾ ಬೆನ್ನ ಮೇಲೆ) ಸೃಜನಶೀಲ ಯಶಸ್ವೀ ನಾಟಕಕಾರರಾದರು. ಈ ನಿಟ್ಟಿನಲ್ಲಿ ಇವರು ಒಬ್ಬ ಅತ್ಯುತ್ತಮ ರಾಜಕೀಯ ಚಿಂತಕ ಮತ್ತು ಅದ್ಭುತ ಕಲೆಗಾರ. ಇವರು ಹೇಳುತ್ತಾರೆ-ನಾಟಕವನ್ನು ಹಣದಿಂದ ಮುಕ್ತಿಗೊಳಿಸುವುದಷ್ಟೆ ಮುಖ್ಯ, ನಾಟಕವನ್ನು ಜನರ ಮನಮುಟ್ಟುವಂತೆ ಆಡುವುದು. ಹೌದು ತುಂಬ ತುಂಬ ಚಾಲೆಂಜಿಂಗ್ ಆದ ವಿಷಯ. ಆದ್ದರಿಂದಲೇ ಅರಿವು, ಚಿಂತನೆ, ಶ್ರದ್ಧೆ, ಪರಿಶ್ರಮ, ನಂಬುಗೆ, ಎಲ್ಲಕ್ಕಿಂತ ಮಿಗಿಲಾಗಿ ನಾಟಕದ ಬಗ್ಗೆ ಪ್ರೇಮ ಈ ರೀತಿಯ ಪರ್ಯಾಯ ನಾಟಕ ರಂಗಕ್ಕೆ ಬೇಕೇ ಬೇಕು.

ಹೀಗೆ ಹುಟ್ಟಿದ್ದು ಮೂರನೆಯ ನಾಟಕ ರಂಗ (1. ಜನಪದ ಕಲೆಗಳು ಉದಾ: ದೊಂಬರಾಟ, ಕೋತಿ ಕುಣಿಸುವಾಟ, ಕರಡಿ ಆಟ ಇತ್ಯಾದಿ. 2. ಬೃಹತ್ ರಂಗಮಂದಿರಗಳಲ್ಲಿ ಸ್ಟೇಜ್ ಮೇಲೆ ನಡೆಯುವ ನಾಟಕ (Proscenium) ಬೀದಿ ನಾಟಕ

ಕರೆಕ್ಟಾಗಿ ಹೇಳಬೇಕೆಂದರೆ "ಬಿಟ್ಟಿ ನಾಟಕ" "ಮುಕ್ತ ನಾಟಕ" ರಂಗಕರ್ಮಿಗಳನ್ನು, ಪ್ರೇಕ್ಷಕರನ್ನೂ ಒಂದೇ ವಿಚಾರ ವೇದಿಕೆಗೆ ತರುವಂತಹ ಈ ನಾಟಕ ರೂಪ ಬಹು ಕ್ರಾಂತಿಕಾರಿ ಯಾದದ್ದು, ಪ್ರೇಕ್ಷಕರು ಯಾವುದೇ ಜಾತಿ ವರ್ಗದವರಾಗ ಬಹುದು; ರಂಗಮಂಚ ಪಾರ್ಕಾಗಿರಬಹುದು ದೇವಸ್ಥಾನದ ಆವರಣವಾಗಿರಬಹುದು, ನದಿ ತೀರವಾದರೂ ಸರಿ, ರೈಲ್ವೆ ಸ್ಟೇಷನ್ನಾದರೂ ಜೈ.

ಬಾದಲ್‌ದಾರ ಭೊಮಾ, ಸ್ಪಾರ್ಟಿಕಸ್, ಏವಂ ಇಂದ್ರಜಿತ್, ಮಿಚಿಲ್, ಬಾಶಿ ಖಬರ್ ನಾಟಕಗಳು ಇಂದಿಗೂ ಅತ್ಯಂತ ಪ್ರಸ್ತುತ ಮತ್ತು ಇಂದಿನ ನಿರ್ದೇಶಕರಿಗೂ ಸವಾಲಾಗಿವೆ. ಪ್ರಗತಿಪರ ಚಿಂತಕರಾದ ಬಾದಲ ಸರ್ಕಾರರು ತಮ್ಮ ನಾಟಕಗಳನ್ನು ರಾಜಕೀಯ ಸಂವಾದಕ್ಕೆಂದೇ ಬಳಸಿಕೊಂಡವರು. ಇಂದಿಗೂ ಇದೇ ನಂಬುಗೆಯನ್ನು ಹೊಂದಿರುವವರು. ಇದರಿಂದ ಸ್ಪೂರ್ತಿ ಪಡೆದ ಅನೇಕ ಎಡಪಂಥೀಯ ಗುಂಪುಗಳು "ಬೀದಿ ನಾಟಕ"ಗಳ ರೂಪವನ್ನು ಹಮ್ಮಿಕೊಂಡವು. ಈ ನಾಟಕ ಹೆಚ್ಚಾಗಿ ಪ್ರಚಾರಕ್ಕಾಗಿಯೇ ಬಳಕೆಗೊಂಡದಾದರೂ ಪ್ರಗತಿಪರ ವಿಚಾರಧಾರೆಯನ್ನು ಬಿಂಬಿಸಿದವು. ದೇಶದ ಅನೇಕ ಹೆಸರಾಂತ ರಂಗ ನಿರ್ದೇಶಕರು ಬಾದಲ್‌ರಿಂದ ಪ್ರಭಾವಿತ ರಾದವರು.

ಬಾದಲ್ ಸರ್ಕಾರರನ್ನು "ನಿಮಗೆ ಏನಿಷ್ಟ? ನಾಟಕ ಬರೆಯುವುದೋ, ನಿರ್ದೇಶಿಸುವುದೋ (ಒಟ್ಟು ತಯಾರಿ) ನಟಿಸುವುದೋ' ಎಂದು ಕೇಳಿದರೆ, ರಂಗ ಶಿಬಿರ ನನಗೆ ಅತ್ಯಂತ ಪ್ರಿಯವಾದುದು ಎನ್ನುತ್ತಾರೆ. ಅವರ ರಂಗ ಶಿಬಿರಗಳ ಬಗ್ಗೆ ನಿಮ್ಮೊಂದಿಗೆ ಸ್ನೇಹಪೂರ್ವಕವಾಗಿ ಹಂಚಿಕೊಳ್ಳಲು ಬೇಕಾದಷ್ಟಿದೆ. ಮುಂದೆಂದಾದರೂ ಬರೆಯುತ್ತೇನೆ. ಇದು ಮುಖ್ಯ ಎಂದೂ ಭಾವಿಸುತ್ತೇನೆ. ಏಕೆಂದರೆ ಇಂದಿಗೂ (ಅವರಿಗೆ 75 ವರ್ಷ ವಯಸ್ಸು) ಅವರು ರಂಗಭೂಮಿಯ ಒಂದು ಶಕ್ತಿ. ತೀವ್ರಗತಿಯಲ್ಲಿ ವ್ಯಾಪಾರೀಕರಣಗೊಳ್ಳುತ್ತಿರುವ ರಂಗಭೂಮಿಯ ಏಕೆ ನಮ್ಮ ಒಟ್ಟು ಬದುಕಿನ ಕತ್ತಲ ಅಂಚಿನಲ್ಲಿ ಕಾಣುವ ಬೆಳ್ಳಿಗೆರೆ.

●

ಥಿಯೇಟರ್‌ನಂತಹ ಮುಖ್ಯ ಮಾಧ್ಯಮ ಹಣದ ಅಗತ್ಯದಿಂದ ಬಿಡುಗಡೆ ಹೊಂದುವುದು ಒಂದು ದೊಡ್ಡ ಸಾಧನೆಯೆಂದೇ ನಾನು ನಂಬುತ್ತೇನೆ. ಇದು ನಮ್ಮಂಥಹ ದೇಶದಲ್ಲಿ ಬಹುಮುಖ್ಯವಾದದ್ದು. ಹಣ ಬೇಡವೆಂದೇನೂ ನಾನು ಹೇಳುವುದಿಲ್ಲ. ಆದರೆ ಹಣ ಕೊಟ್ಟರೆ ಮಾತ್ರ ನಾಟಕ ತೋರಿಸುವುದು, ಇಲ್ಲದಿದ್ದರೆ ಇಲ್ಲ ಅಂತಾಗಬಾರದು. ನಾಟಕದ ನಂತರ ನಾವು ಒಂದು ರೌಂಡ್ ಬಂದರೆ ಜನ ತಮಗಿಷ್ಟಬಂದಷ್ಟು ಹಣ ಹಾಕಬಹುದು. ಇದು ನಾಟಕದ ಬೆಲೆ ಕಟ್ಟದಂತಾಗಲಿ, ವಂತಿಗೆ ನೀಡಿದಂತಾಗಲಿ ಆಗುವುದಿಲ್ಲ, ಇದನ್ನು ನಾನು ಭಾಗವಹಿಸುವಿಕೆ ಎನ್ನುತ್ತೇನೆ.

ನಾವು ತೀರ ಬಡವರಿರುವ ಪ್ರದೇಶದಲ್ಲಿ ನಾಟಕವಾಡಿದಾಗಲೂ ಅವರಿಗೂ ನಮ್ಮ ಪ್ರಯತ್ನದಲ್ಲಿ ಭಾಗಿಗಳಾಗಲು ಅವಕಾಶ ಕೊಡುತ್ತೇವೆ. ಅವರು ಎಷ್ಟೇ ಕಡಿಮೆ ಕೊಟ್ಟರೂ ನಮಗೆ ಅದೇ ಸಾಕು ಎಂದು ನಾನು ಕಂಡುಕೊಂಡಿದ್ದೇನೆ. ಇದರಿಂದಾಗಿ ನಾವು ಟಿಕೆಟ್ ಮಾರಲು ಹೋಗುವುದು ತಪ್ಪುತ್ತದೆ, ಸಿಗರೇಟು ಕಂಪನಿಯವರಿಂದ ನಾಟಕದ ಪೋಷಣೆಗೆ ಹಣ ಪಡೆಯುವುದು ತಪ್ಪುತ್ತದೆ. ಸಮಾಜದಲ್ಲಿ ಬದಲಾವಣೆ ತರುವುದು ನಮ್ಮ ಮುಖ್ಯ ಉದ್ದೇಶ. ಹಾಗಂತ ನಾವು ಪ್ರತಿ ನಾಟಕದಲ್ಲೂ ಸಮಾಜ ಬದಲಾಗಲಿ, ಬದಲಾಗಲಿ ಎಂದು ಘೋಷಣೆಗಳನ್ನು ಕೂಗುತ್ತ ಕೂರಕ್ಕಾಗಲ್ಲ' 'ರಂಗಭೂಮಿಯೇ ಒಂದು ರಾಜಕೀಯ ಹೇಳಿಕೆ (political statement)'.

○ ಬಾದಲ್ ಸರ್ಕಾರ್

# ಬಹುವಚನದವರ ಮೇಲೆ ಏಕವಚನದವರ ದಾಳಿ

**ಕೊ**ಡಗಿನ ಪ್ರಗತಿಪರ ವೇದಿಕೆಯಾದ 'ಬಹುವಚನ'ವು ಅಧ್ಯಾಪಕರು, ಲೇಖಕರು, ಕಲಾವಿದರು, ವಿಚಾರವಂತರನ್ನೊಳಗೊಂಡಿದೆ. ಈ ವೇದಿಕೆಯವರು ದಿನಾಂಕ 10-12-2000ದಂದು ಮಡಿಕೇರಿಯಲ್ಲಿ 'ಕೋಮುವಾದ ಹಲವು ಮುಖಗಳು' ಎಂಬ ವಿಷಯ ಕುರಿತು ಚರ್ಚೆಯನ್ನು ಏರ್ಪಡಿಸಿದ್ದರು. ಆ ಸಭೆಯಲ್ಲಿ ಜಿ. ರಾಜಶೇಖರ್, ರಹಮತ್ ತರೀಕೆರೆ ಅವರುಗಳು ಮಾತನಾಡಲಿದ್ದರು. ಮಡಿಕೇರಿಯ ವಿಧಾನ ಸಭಾಂಗಣದಲ್ಲಿ ಕಾರ್ಯಕ್ರಮ ಪ್ರಾರಂಭವಾಗಿ ವೇದಿಕೆಯ ಸಂಚಾಲಕರಾದ ಪಟ್ಟಾಭಿರಾಮ-ಸೋಮಯಾಜಿ ಯವರು ಪ್ರಾಸ್ತವಿಕ ಮಾತುಗಳನ್ನು ಶುರು ಮಾಡುತ್ತಿದ್ದಂತೆಯೇ ಬಿ.ಜೆ.ಪಿ.ಯ ಜಿಲ್ಲಾ ಅಧ್ಯಕ್ಷರಾದ ಬೋಪಯ್ಯ ನವರು ತಮ್ಮ ಆರ್.ಎಸ್.ಎಸ್. ಭಜರಂಗ ದಳಗಳ ಸೇನಾ ಪಡೆಯೊಂದಿಗೆ ನುಗ್ಗಿ ಸೋಮಾಯಾಜಿ ಯವರನ್ನು ಮಾತನಾಡಲು ಬಿಡದೆ, ಕೂಗಾಡುತ್ತಾ ಗದ್ದಲ ಎಬ್ಬಿಸಿ ಅವರನ್ನು ಎಳೆದಾಡಿ ಅವರ ಕೈಲಿದ್ದ ಕಾಗದ ಪತ್ರಗಳನ್ನು ಕಿತ್ತುಕೊಂಡು, ಅವರನ್ನು ಅವಾಚ್ಯ ಶಬ್ದಗಳಿಂದ ಬೈದುದಲ್ಲದೆ, ಅವರ ಕುಲಗೋತ್ರಗಳ ವಿವರವನ್ನು ಹೇಳಲು ಒತ್ತಾಯಿಸಿದರು. ಆಗ ಅಲ್ಲಿಗೆ ಆಗಮಿಸಿದ ಸರ್ಕಲ್ ಇನ್‌ಸ್ಪೆಕ್ಟರ್ ಕೆ. ಎನ್. ಮಾದಯ್ಯನವರು ಪರಿಸ್ಥಿತಿಯನ್ನು ನಿಯಂತ್ರಿಸುವ ಬದಲು ಬಹುವಚನದವರನ್ನೆ ದಬಾಯಿಸತೊಡಗಿದರು. ಬಹುವಚನ ರಿಜಿಸ್ಟರ್ಡ್ ವೇದಿಕೆಯೆ? ಸಭೆ ನಡೆಯಲು ಲಿಖಿತ ಪರವಾನಿಗೆ ಇದೆಯೇ ಎಂದು ಅಂತಹ ಪರಿಸ್ಥಿತಿಯಲ್ಲಿ ವಿಚಾರಣೆಯನ್ನೆ ಶುರು ಮಾಡಿದರು. ಇದರಿಂದ ಇನ್ನಷ್ಟು ಹುಮ್ಮಸ್ಸುಗೊಂಡ ಸಂಸ್ಕೃತಿಯ ಗುತ್ತಿಗೆದಾರರು ಗದ್ದಲ ಹೆಚ್ಚಿಸಿದರು. ಡಿ.ವೈ.ಎಫ್.ಐ.ನ ಪೀಟರ್ ಲೋಬೊ, ಪ್ರಜಾವೇದಿಕೆಯ ವಿದ್ಯಾದಲ್ ಅವರು ಅಲ್ಲದ್ದುದನ್ನು ಕಂಡು ಬಿ.ಜೆ.ಪಿ. ಸೇನೆ ಪಡೆ ಅವರ ಮೇಲೆರಗಿತು. ಅವರನ್ನು ಬಾಯಿಗೆ ಬಂದಂತೆ ಹೊಲಸು ಮಾತುಗಳಲ್ಲಿ ಬೈಯುತ್ತಾ ಅವರನ್ನು ಎಳೆದಾಡತೊಡಗಿದರು. ಬಹುವಚನದ ಬ್ಯಾನರ್ ಅನ್ನು ಹರಿದು ಚಿಂದಿಮಾಡಿ, ವೇದಿಕೆಯ ಮೇಲಿದ್ದ ಎರಡು ಟೇಪ್‌ರೆಕಾರ್ಡರ್ ಅನ್ನು ಪುಡಿಪುಡಿ ಮಾಡಿದರು. ಈ ದಾಂಧಲೆಯಿಂದಾಗಿ ಸಭೆಯನ್ನು ರದ್ದುಪಡಿಸಲಾಯ್ತು.

ಸಂಘಟಕರು ತಕ್ಷಣವೇ ತುರ್ತು ಪತ್ರಿಕಾಗೋಷ್ಠಿ ಕರೆದು ಬಿ.ಜೆ.ಪಿ. ಸೇನಾ ದಳದ ಗೂಂಡಾಗಿರಿಯನ್ನು ಖಂಡಿಸಿದರು. ವೇದಿಕೆಯು ವಿಚಾರ ಸಂಕಿರಣವನ್ನು ಕಾನೂನಿನ ಚೌಕಟ್ಟಿನೊಳಗೆ ಮಾಡಲಾಗಿದೆ. ದೇಶಾದ್ಯಂತ ಕೋಮುವಾದ ಕುರಿತಂತೆ ಚರ್ಚೆ ನಡೆಯುತ್ತಿದೆ. ಎಲ್ಲರಿಗೂ ತಮ್ಮ ತಮ್ಮ ಅಭಿಪ್ರಾಯ ವ್ಯಕ್ತಪಡಿಸುವುದನ್ನು ಬಿಟ್ಟು ಗೂಂಡಾಗಿರಿ ನಡೆಸಿ ಸಭೆ ನಿಲ್ಲುವಂತೆ ಮಾಡಿದ್ದು ಖಂಡನೀಯ. ಇವರ ಬೆದರಿಕೆಗೆ ಮಣಿಯದೇ ವೇದಿಕೆಯು ಮುಂದೆಯೂ ತನ್ನ ಕಾರ್ಯಕ್ರಮ ಗಳನ್ನು ನಡೆಸುವುದೆಂದು ಹೇಳಿದರು. ವೈಚಾರಿಕ ಭಿನ್ನಾಭಿಪ್ರಾಯ ವನ್ನು ವಿಚಾರಣೆಯ ಘರ್ಷಣೆಯ ಮೂಲಕ ವ್ಯಕ್ತಪಡಿಸಬೇಕೆ ವಿನಹಃ ದೈಹಿಕ, ಮಾನಸಿಕ ಘರ್ಷಣೆಗೆ ಇಳಿಯಬಾರದೆಂದು ರಾಜಶೇಖರ್ ಅವರು ಹೇಳಿದರು.

ದಿನಾಂಕ 16-12-2000 ದಂದು ಗಾಂಧಿ ಮೈದಾನದಲ್ಲಿ ಬಿ.ಜೆ.ಪಿ. ಸೇನೆಯ ಗೂಂಡಾಗಿರಿಯನ್ನು ವಿರೋಧಿಸಿ ಧರಣಿ ನಡೆಸಲಾಯಿತು. ಅಲ್ಲದೆ ಗೂಂಡಾಗಿರಿಯಿಂದ ವಿಚಲಿತರಾಗದ ಬಹುವಚನ ವೇದಿಕೆಯವರು ಡಿ. 30 ರಂದು ಮಡಿಕೇರಿಯ ಟೌನ್‌ಹಾಲ್‌ನಲ್ಲಿ ಕೋಮುವಾದ ವಿರೋಧಿ ವಿಚಾರ ಸಂಕಿರಣವನ್ನಿಟ್ಟುಕೊಂಡಿದ್ದರು. ಮುನ್ನೂರಕ್ಕೂ ಹೆಚ್ಚಿನ (ಮೊದಲ ಸಭೆಯಲ್ಲಿ 20-30 ಜನರಿದ್ದರು) ಜನರು ಸಭೆಯಲ್ಲಿ ಭಾಗವಹಿಸಿ ಚರ್ಚೆಯನ್ನು ಯಶಸ್ವಿಗೊಳಿಸಿದರು. ಬಿ.ಜೆ.ಪಿ. ಸೇನೆಯ ಗೂಂಡಾಗಿರಿಗೆ ಜನ ತಕ್ಕ ಉತ್ತರ ನೀಡಿದರು.

ಇಡೀ ದೇಶದ ಸಂಸ್ಕೃತಿಯನ್ನು ಗುತ್ತಿಗೆ ಪಡೆದವರಂತೆ ಆಡುವ ಬಿ.ಜೆ.ಪಿ. ಮತ್ತವರ ಸೇನಾ ಪಡೆಗಳು ಕೋಮುವಾದ ಎಂದೊಡನೆ ಸಜ್ಜಾಗಿ ದಾಂಧಲೆ ಮಾಡುವುದನ್ನೇ ಸಂಸ್ಕೃತಿ ಎಂದು ಕೊಂಡಿವೆ.

●

ಮಾನಸ ಪತ್ರಿಕೆ ಯಾವ ಸಂಸ್ಥೆಯ, ಸರ್ಕಾರದ ನೆರವಿಲ್ಲದೇ ಪ್ರಕಟವಾಗುತ್ತಿರುವ ಮಹಿಳೆಯರೇ ನಡೆಸುತ್ತಿರುವ ಸ್ವಾಯತ್ತ ಪತ್ರಿಕೆ. ಓದುಗರು ಹಾಗೂ ಸಹೃದಯರು ನೀಡುವ ಆರ್ಥಿಕ ನೆರವೇ ಪತ್ರಿಕೆಯ ಜೀವಾಳ. ಚಂದಾದಾರರಿಗೆ ಚಂದಾ ಅವಧಿ ಮುಕ್ತಾಯವಾದುದರ ಬಗ್ಗೆ ಸೂಚನೆಯನ್ನು ನೀಡಲಾಗುತ್ತದೆ. ಓದುಗರು ತಕ್ಷಣ ಚಂದಾ ನವೀಕರಿಸಬೇಕೆಂದು ಕೋರುತ್ತೇವೆ. ಪತ್ರಿಕೆಯು ಉಳಿದು ಬೆಳೆಯಬೇಕಾದರೆ ಓದುಗರ ಸಹಕಾರ ಅತ್ಯಗತ್ಯ.

**ವಾರ್ಷಿಕ ಚಂದಾ : 50 ರೂ.**

**ಸಂಸ್ಥೆಗಳಿಗೆ : 100 ರೂ.**

*ಸಂ. ಮಂಡಳಿ*

REGD No. CPMG/KA/BGE/289/2001

BOOK -POST
PRINTED MATTER

ವಿಳಾಸ :
**ಮಾನಸ**
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು - 560 067